# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES



ಸಂಪುಟ:01 Volume:01 • ಸಂಚಿಕೆ:153 Issue:153 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 10.11.2023 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2



T.M.A.E.S. SOCIETY
HARAPANAHALLI
T.M.A.E.S.
RESIDENTIAL PU COLLEGE
SCIENCE - PCMB / PCMC
COMMERCE -EBAS / EBACs / BASCs
We are Good at
• Having dynamic and experience faculties
• Best Study Material
• Regualar Mock Test & Assignments
Fecilities
• Separate Hostel Facility for Boys & Girls with hygienic food
• Mentoring System for holystic progress of Child
• Transport facility available
Call Now for more information:
9483510530, 6366437712
DAV Campus Sanklapur Ballari Road Hosapete-583201
In Collaboration with
Avanti
IIT-JEE | NEET | Foundation


ಮೈಕ್ರೋ ನ್ಯೂಸ್

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ಇಂದಿನಿಂದ ಬಸವದರ್ಶನ ಪ್ರವಚನ

**ಹಂಪಿ ಟೈಮ್ಸ್ ಹೊಸಪೇಟೆ:**
ನಗರದ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದಲ್ಲಿ ನ.10 ರಂದು ಬೆಳಿಗ್ಗೆ 10 ಕ್ಕೆ ಷಟ್‌ಸ್ಥಳ ಧ್ವಜಾರೋಹಣವನ್ನು ದರೂರು ಶ್ರೀ ಸಂಗನಬಸವರೇಶ್ವರ ವಿರಕ್ತಮಠದ ಶ್ರೀ ಕೊಟ್ಟೂರು ಮಹಾಸ್ವಾಮಿಗಳು ನೆರವೇರಿಸಲಿದ್ದಾರೆ. ಸಂಜೆ. 7ಕ್ಕೆ ಬಸವದರ್ಶನ ಪ್ರವಚನ ಪ್ರಾರಂಭಗೊಳ್ಳಲಿದೆ. ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯವಹಿಸುವರು. ಕಮ್ಮರಚೇಡು ಕಲ್ಯಾಣಸ್ವಾಮಿಮಠದ ಶ್ರೀ ಕಲ್ಯಾಣ ಮಹಾಸ್ವಾಮಿಗಳು ಅಧ್ಯಕ್ಷತೆವಹಿಸುವರು.

ಗರಗನಾಗಲಾಪುರದ ಶ್ರೀ ನಿರಂಜಪ್ರಭು ದೇವರು, ಸೋಮಸಮುದ್ರದ ಶ್ರೀ ಸಿದ್ಧಲಿಂಗ ದೇವರು, ಶ್ರೀಧರ ಗಡ್ಡೆಯ ಶ್ರೀ ಮರಿಕೊಟ್ಟೂರು ದೇವರು, ಬೂದಗುಂಪದ ಶ್ರೀ ಸಿದ್ಧೇಶ್ವರ ದೇವರು, ಅಡ್ನೂರಿನ ಶ್ರೀ ವಿಶ್ವೇಶ್ವರ ದೇವರು ಉಪಸ್ಥಿತರಿರಲಿದ್ದಾರೆ.

ಮಣಕವಾಡದ ಶ್ರೀ ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು ಪ್ರವಚನ ನೀಡಲಿದ್ದಾರೆ.

ಬಸವದರ್ಶನ ಪ್ರವಚನವು ನ.10 ರಿಂದ ನ.22ರವರೆಗೆ ನಿತ್ಯ ಸಂಜೆ 7 ರಿಂದ 8 ಗಂಟೆವರೆಗೆ ಜರುಗಲಿದೆ. ನಿತ್ಯ ಪ್ರವಚನ ಕೇಳಿ ಪುನೀತರಾಗಬೇಕೆಂದು ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಸಕಲ ಸದ್ಭಕ್ತ ಮಂಡಳಿ ತಿಳಿಸಿದೆ.

## ವೃತ್ತಿರಂಗಭೂಮಿ ಕಾಯಕಲ್ಪ ಯೋಜನೆ: ಧನಸಹಾಯಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2023–24ನೇ ಸಾಲಿಗೆ ವೃತ್ತಿರಂಗಭೂಮಿ ಕಾಯಕಲ್ಪ ಯೋಜನೆಯಡಿ ಧನಸಹಾಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.
ಕನಿಷ್ಠ 5 ವರ್ಷಗಳ ನೋಂದಾಯಿತ ವೃತ್ತಿ ನಾಟಕ ಕಂಪನಿಗಳು ಅರ್ಜಿ ಸಲ್ಲಿಸಬಹುದಾಗಿದೆ.
ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ (ನಿಗದಿತ ಅರ್ಜಿ ನಮೂನೆ ಹಾಗೂ ಮಾರ್ಗಸೂಚಿಯನ್ನು website: kannadasiri.karnataka.gov.in ನಲ್ಲಿ ಪಡೆಯಬಹುದು) ಅಗತ್ಯ ದಾಖಲೆಗಳನ್ನು ಲಗತ್ತಿಸಿ, ಡಿಸೆಂಬರ್ 7 ರೊಳಗೆ ಅರ್ಜಿಯನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

## ಪ್ರತಿಭಾ ಕಾರಂಜಿ, ಕಲೋತ್ಸವ ಕಾರ್ಯಕ್ರಮ ನ.11ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**
2023–24ನೇ ಸಾಲಿನ ಹೊಸಪೇಟೆ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ನ.11ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸಿದ್ದಿಪ್ರಿಯ ಕಲ್ಯಾಣ ಮಂಟಪದ ಹತ್ತಿರವಿರುವ ವಿಜ್ಞಾನ ಇ-ಟೆಕ್ನೊ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.
ಕಾರ್ಯಕ್ರಮದಲ್ಲಿ 1 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸ್ಪರ್ಧೆಗಳು ನಡೆಯಲಿವೆ ಎಂದು ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉತ್ತರಿಸಲು ತತ್ತರಿಸಿದ ಅಧಿಕಾರಿಗಳು


### ಆದಾಯದ ಮೂಲಗಳನ್ನೆ ಮರೆತ ಅಧಿಕಾರಿಗಳು | ಸರ್ಕಾರಿ ಆಸ್ತಿ ರಕ್ಷಿಸಲು ನಿರ್ಲಕ್ಷ್ಯ | ಸದಸ್ಯರ ಆಕ್ರೋಶ
### ಖಾಸಗಿ-ಸರ್ಕಾರಿ ಭೂಮಿ ಅದಲು ಬದಲು ವಿಷಯ ಮುಂದೂಡಿಕೆ | ಡ್ಯಾಂ ಪಕ್ಕದಲ್ಲಿದ್ದರೂ ಕೊಳವೆ ಬಾವಿಗಳಿಗೆ ಆದ್ಯತೆ




**ಹಂಪಿ ಟೈಮ್ಸ್ ಹೊಸಪೇಟೆ:**
ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಿದ್ದ ನಗರಸಭೆ ಸಾಮಾನ್ಯ ಸಭೆಯ ಸಭಾಂಗಣ ಗುರುವಾರ ರಣರಂಗವಾಗಿ ಮಾರ್ಪಟ್ಟಿತು!. ಅಧಿಕಾರಿಗಳು ಪೂರ್ಣ ಓದುವ ಮುನ್ನವೇ ಕ್ಷಣಾರ್ಧದಲ್ಲೆ ಕೆಲ ವಿಷಯಗಳಿಗೆ ಒಪ್ಪಿಗೆ ಸೂಚಿಸಿದರು. ಗಂಭೀರವಾಗಿ ಚರ್ಚೆಯಾಗಬೇಕಿದ್ದ ಸರ್ಕಾರಿ–ಖಾಸಗಿ ಭೂಮಿ ಅದಲು ಬದಲು ವಿಷಯಗಳನ್ನು ಪ್ರಸ್ತಾಪಿಸದೇ ಮುಂದೂಡಲಾಯಿತು. ಈವರೆಗೂ ನೂರಾರು ಸಭೆಗಳು ನಡೆದರೂ ಕುಡಿಯುವ ನೀರು, ಯುಜಿಡಿ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತಿಲ್ಲವೆಂಬ ಸದಸ್ಯರ ಅಳಲು ಕೇಳುವವರಿಲ್ಲದಂತಾಗಿತ್ತು. ಮಧ್ಯಾಹ್ನ 3 ಗಂಟೆಯಾದರೂ ಊಟಕ್ಕೂ ಬಿಡದೇ ಚರ್ಚೆ ಮುಂದುವರೆಸಿದ ಅಧಿಕಾರಿಗಳ ವಿರುದ್ಧ ಮಹಿಳಾ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ನಗರಸಭೆ ಆಸ್ತಿಗಳನ್ನು ಉಳಿಸುವಲ್ಲಿ ಅಧಿಕಾರಿಗಳು ತೋರಿದ ನಿರ್ಲಕ್ಷ್ಯಕ್ಕೆ ಸದಸ್ಯರ ಆಕ್ರೋಶ. ದೂರದೃಷ್ಟಿ ಇಲ್ಲದ ಅಧಿಕಾರಿಗಳ ಕಾರ್ಯವೈಖರಿ ಖಂಡಿಸಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸದಸ್ಯರು. ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸದೆ ತತ್ತರಿಸಿದ ಅಧಿಕಾರಿಗಳು... ಸಭೆಯ ದೃಷ್ಯಗಳಿವು.

ಅಭಿವೃದ್ಧಿ ಕೆಲಸಗಳಿಗೆ ಅನುದಾನವಿಲ್ಲ ಎಂದು ಹೇಳುವ ಅಧಿಕಾರಿಗಳು, ನಗರಸಭೆಗೆ ಆದಾಯದ ಮೂಲವಾಗಿರುವ ನಗರಸಭೆಯ 158 ಮಳಿಗೆಗಳಿಂದ ಬಾಡಿಗೆ ಸಂಗ್ರಹಿಸದಿರುವುದು ಏಕೆ? ದಶಕಗಳ ಹಿಂದೆಯೇ ನೀಡಿದ ಮಳಿಗೆಗಳನ್ನು ಮರುಟೆಂಡರ್ ಏಕೆ ಮಾಡಿಲ್ಲ. ಬಾಡಿಗೆಪಡೆದ ಮೂಲ ವ್ಯಕ್ತಿಗಳೇ ಮಳಿಗೆಗಳಲ್ಲಿ ವ್ಯವಹಾರ ಮಾಡದೆ, ಇತರರಿಗೆ ನೀಡಿರುವುದು ಅಧಿಕಾರಿಗಳ ಕಣ್ಣಿಗೆ ಕಂಡರೂ ಸುಮ್ಮನಿರುವುದೇಕೆ? ಆದಾಯದ ಮೂಲಗಳನ್ನೆ ನಿರ್ಲಕ್ಷಿಸುತ್ತಿರುವ ಅಧಿಕಾರಿಗಳು ಹಣದಾಸೆಗೆ ಪ್ರಭಾವಿ ವ್ಯಕ್ತಿಗಳೊಂದಿಗೆ ಶ್ಯಾಮೀಲಾಗಿದ್ದೀರಾ ಎಂದು ಸದಸ್ಯ ಎಲ್.ಎಸ್.ಆನಂದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಪೌರಾಯುಕ್ತರು ಪ್ರತಿಕ್ರಿಯಿಸಿ, ಯಾರೊಂದಿಗೂ ಶ್ಯಾಮೀಲಾಗಿಲ್ಲ. ಈಗಾಗಲೇ ನೋಟಿಸು ನೀಡಲಾಗಿದ್ದು, ನಿಯಮಾನುಸಾರ ಕ್ರಮಜರುಗಿಸಲಾಗುವುದು ಎಂದು ಉತ್ತರಿಸಿದರು. ಮಳಿಗೆಗಳನ್ನು ಯಾರು ಪಡೆದಿದ್ದಾರೆ ಎಂದು ಕೇಳಿದರೆ ದಾಖಲೆಗಳಿಲ್ಲವೆನ್ನುವ ನಿಮ್ಮ ಸಿಬ್ಬಂದಿ ಯಾರಿಗೆ ನೋಟೀಸು ಜಾರಿ ಮಾಡಿದ್ದೀರಿ?, ನೋಟೀಸ್ ಜಾರಿಮಾಡುವುದು ತಡೆಯಾಜ್ಞೆ ತರಲಿಕ್ಕಾಗಿಯೋ, ದಿಢೀರನೇ ತೆರಳಿ ಕ್ರಮಕೈಗೊಳ್ಳಲು ನಿಮಗಧಿಕಾರವಿಲ್ಲವೋ, ನಗರಸಭೆ ಆಸ್ತಿಯನ್ನು ಉಳಿಸುವ ನಿಟ್ಟಿನಲ್ಲಿ ಮತ್ತು ಆದಾಯದ ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಮುಂದಾಗಬೇಕು. ತಾವು ಕೆಲಸ ಮಾಡಲೋ ಬಂದಿದ್ದೀರೋ ಅಥವಾ ಹೊರಗೆ ಓಡಾಡಿಕೊಂಡಿರಲು ಬಂದಿದ್ದೀರೋ? ಸಾರ್ವಜನಿಕರು, ಸದಸ್ಯರು ಕಾರ್ಯಾಲಯಕ್ಕೆ ಬಂದರೆ, ಪೌರಾಯುಕ್ತರ ಕೊಠಡಿಯಲ್ಲಿ ಖಾಲಿ ಕುರ್ಚಿ ಕಾಣಿಸುತ್ತಿದೆ. ಸಮಸ್ಯೆಗಳನ್ನು ಪರಿಹರಿಸುವವರೆ ಡಿಸಿ, ಎಸಿ ಕಚೇರಿಗಳಲ್ಲಿ ಮೀಟಿಂಗ್ ಎನ್ನುವ ಸಿದ್ಧ ಉತ್ತರ ಹೇಳಿ ಓಡಾಡುತ್ತಿದ್ದೀರಿ. ಹೀಗಾದರೆ ಅಭಿವೃದ್ಧಿ ಕೆಲಸಗಳನ್ನು ಮಾಡುವುದಾದರೂ ಹೇಗೆ ಹೇಳಿ ಎಂದ ಸದಸ್ಯ ಎಲ್.ಎಸ್.ಆನಂದನ ಪ್ರಶ್ನೆಗೆ ಇತರ ಸದಸ್ಯರು ಧ್ವನಿಗೂಡಿಸಿದರು. ಪೌರಾಯುಕ್ತರ ಮೌನವೆ ಎಲ್ಲರಿಗೂ ಉತ್ತರವಾಗಿತ್ತು.



ನಗರದ ಜಂಭುನಾಥ ರಸ್ತೆಯ ಮುಕ್ತಿಧಾಮದಲ್ಲಿ ಶವಗಳನ್ನು ಸುಡುವುದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಯುಮಾಲಿನ್ಯಗೊಂಡು ವಿಪರೀತ ವಾಸನೆ ಬರುತ್ತಿದೆ. ಮುಕ್ತಿಧಾಮದಲ್ಲಿ ಶವಗಳ ಸುಟ್ಟ ವಾಸನೆ ಬಾರದಂತೆ ಕ್ರಮವಹಿಸಬೇಕು ಎಂದು ಸದಸ್ಯ 22ನೇ ವಾರ್ಡಿನ ಶೆಕ್ಷಾವಲಿ ಪ್ರಸ್ತಾಪಿಸುತ್ತಿದಂತೆ, 29ನೇ ವಾರ್ಡಿನ ಸದಸ್ಯ ರಮೇಶ ಗುಪ್ತ ಮಧ್ಯಪ್ರವೇಶಿಸಿ, ಶತಮಾನದಿಂದ ಅದೇ ಜಾಗದಲ್ಲಿ ಶವಗಳ ಸಂಸ್ಕಾರ ಮಾಡುತ್ತಾ ಬರಲಾಗಿದೆ. ಅಲ್ಲಿಯೇ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಮಧ್ಯಪ್ರವೇಶಿಸಿದ ರಾಘವೇಂದ್ರ ಮತ್ತು ಕೆಲ ಸದಸ್ಯರು ನಗರಸಭೆಯಿಂದ ಬೇರೆಡೆ ಸ್ಥಳ ನೀಡಿ, ಅಗತ್ಯ ವ್ಯವಸ್ಥೆ ಕಲ್ಪಿಸಿಕೊಡಿ, ಇಲ್ಲದಿದ್ದರೆ ಶವ ಸುಟ್ಟ ವಾಸನೆ ಬಾರದಂತೆ ಕ್ರಮವಹಿಸಬೇಕು. ಹೀಗೆ ಮುಂದುವರೆಸಿದರೆ ತೀವ್ರ ಹೊರಾಟ ಮಾಡಲಾಗುವುದು ಎನ್ನುತ್ತಿದ್ದಂತೆ ಸದಸ್ಯರ ನಡುವೆ ವಾಕ್ಸಮರ ನಡೆಯಿತು. ಕೈ ಕೈ ಮಿಲಾಯಿಸುವ ಹಂತ ತಲುಪುತ್ತಿದ್ದಂತೆ ಅಲ್ಲಿದ್ದ ಸದಸ್ಯರು ತಡೆದು ಸಮಾಧಾನ ಪಡಿಸಿದ ಘಟನೆ ಜರುಗಿತು.

ನಗರಸಭೆ ಪೌರಾಯುಕ್ತರು ವಾರ್ಡ್‌ಗಳಿಗೆ ಭೇಟಿ ಜನರ ಸಮಸ್ಯೆ ಆಲಿಸಬೇಕು. ಬರೀ ಮೀಟಿಂಗ್‌ನಲ್ಲೆ ಕಾಲ ಕಳೆದರೆ ಜನರಿಗೆ ಉತ್ತರಿಸುವವರು ಯಾರು? ನಮ್ಮ ವಾರ್ಡಿಗೆ ಬನ್ನಿ, ನಮ್ಮ ವಾರ್ಡಿಗೆ ಬನ್ನಿ ಎಂದು ಅನೇಕ ಸದಸ್ಯರು ಸಭೇಯಲ್ಲೆ ಪೌರಾಯುಕ್ತರನ್ನು ಆಹ್ವಾನಿಸಿದರು. ಯುಜಿಡಿ, ಕುಡಿಯುವ ನೀರಿನ ಸಮಸ್ಯೆ, ನಗರಸಭೆ ವಾಹನ ನಿರ್ವಹಣೆಯಲ್ಲಿ ಅವ್ಯವಹಾರ, ಕೋಟಿ ಕೋಟಿ ಹಣ ಕೊಟ್ಟು ಖರೀದಿಸಿದ ವಾಹನಗಳು ಮೂಲೆ ಗುಂಪು, ಹಿಂದಿನ ಸಭೆಯ ಠರಾವಿನಲ್ಲೆ ತಪ್ಪು ಬರಹ, ಉಲ್ಟಾ ಪಲ್ಟ ಉತ್ತರ ನೀಡಿದ ಅಧಿಕಾರಿಗಳನ್ನು ಸದಸ್ಯ ಖದೀರ ತರಾಟೆ ತೆಗೆದುಕೊಂಡರು.

ಸದಸ್ಯ ತಾರಿಹಳ್ಳಿ ಜಂಬುನಾಥ ಮಾತನಾಡಿ, ನಗರಸಭೆ ಕಾರ್ಮಿಕರು ಮಾಡಿದ ಯುಜಿಡಿ, ಸ್ವಚ್ಛತೆ ಕೆಲಸಗಳನ್ನು ಶಾಸಕ ಗವಿಯಪ್ಪನವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ತಾವು ಮಾಡಿಸಿದ್ದು ಎಂದು ಹಂಚಿಕೊಂಡಿರುವುದು ಸಣ್ಣತನ ಕೆಲಸವಾಗಿದೆ. ನಗರಸಭೆ ಸದಸ್ಯರು, ಅಧಿಕಾರಿಗಳು ಸಾರ್ವಜನಿಕರ ಪರ ಕೆಲಸ ಮಾಡಲು ಇದ್ದಾರೆ. ತಮಗೆ ಇಷ್ಟವಿದ್ದಲ್ಲಿ ತಾವು ಮಾಡಿಸಿದ ಪ್ರತ್ಯೇಕ ಕೆಲಸಗಳನ್ನು ಹಂಚಿಕೊಳ್ಳಲಿ, ನಗರಸಭೆ ಮಾಡಿದ ಕೆಲಸಗಳನ್ನು ತಮ್ಮದೆಂದು ಜನರು ತಪ್ಪು ಮಾಹಿತಿ ಹಂಚುವುದು ಸರಿಯಲ್ಲ ಎಂದರು.

ಇನ್ನುಳಿದಂತೆ ನಗರದ ಅನೇಕ ವಾರ್ಡ್‌ಗಳಲ್ಲಿ ಬೋರ್‌ವೆಲ್ ಕೊರೆಯಿಸುವುದು, ಅಪೂರ್ಣಗೊಂಡ ಪೈಪ್‌ಲೈನ್‌ಗಳ ಸಂಪರ್ಕ ಕಲ್ಪಿಸುವುದು. ವಾಹನಗಳ ಡೀಸೇಲ್ ಬಳಕೆಯಲ್ಲಿ ಅವ್ಯವಹಾರ ತಡೆಯುವುದು. ರಜೆಯಲ್ಲಿರುವ ಎಇಇ ಅಧಿಕಾರಿಗಳ ಬಾಡಿಗೆ ವಾಹನ ರದ್ದು ಸೇರಿದಂತೆ ಚರ್ಚೆಗಳು ನಡೆದವು. ನಗರಸಭೆ ಸದಸ್ಯರಾದ ಕಿರಣ್ ಶಂಕ್ರಿ, ಕೆ.ಗೌಸ್, ಜೀವರತ್ನಂ, ಹುಲುಗಪ್ಪ, ಹೆಚ್.ಮುನ್ನಿ., ರೋಹಿಣಿ ವೆಂಕಟೇಶ್, ಹನುಮಂತಪ್ಪ, ಲತಾ, ಜಿ.ಎಸ್.ಹನುಮಂತಪ್ಪ, ಕೆ.ಮಹೇಶಕುಮಾರ ಮಾತನಾಡಿದರು. ಇತರ ಸದಸ್ಯರು ಉಪಸ್ಥಿತರಿದ್ದರು. ಎ.ಲತಾ ಅಧ್ಯಕ್ಷತೆವಹಿಸಿದ್ದರು. ಉಪಾಧ್ಯಕ್ಷ ರೂಪೇಶಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಸಂತೋಷ ಇದ್ದರು. ಸಿಬ್ಬಂದಿ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದರು.




# ಭತ್ತ ಖರೀದಿ ಕೇಂದ್ರಗಳ ಆರಂಭಿಸಿ

### ಕನಿಷ್ಠ ಬೆಂಬಲ ಬೆಲೆ ಯೋಜನೆ: ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಡಿಸಿ ದಿವಾಕರ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**
ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ ಕೇಂದ್ರಗಳ ಪ್ರಾರಂಭಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

2023–24ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ ಖರೀದಿಸುವ ವಿಷಯದ ಬಗ್ಗೆ ಚರ್ಚಿಸುವ ಕುರಿತು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಪ್ರಸಕ್ತ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ ಖರೀದಿಸಲು ಸರ್ಕಾರವು ಅನುಮತಿ ನೀಡಿದೆ. ಸರ್ಕಾರವು ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ ರೂ. 2183 ರಿಂದ 2203 ರಂತೆ ಬೆಲೆ ನಿಗದಿಪಡಿಸಿ ಮಾರ್ಗಸೂಚಿಗಳನ್ನು ನೀಡಿದೆ. ಅದರಂತೆ ಬೆಂಬಲ ಬೆಲೆಯಲ್ಲಿ ಜಿಲ್ಲೆಯ ರೈತರಿಂದ ಭತ್ತ ಖರೀದಿಸಲು ಜಿಲ್ಲೆಯ ವಿವಿಧೆಡೆ ಖರೀದಿ ಕೇಂದ್ರಗಳ ಪ್ರಾರಂಭಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಸ್ಥಾಪಿಸಲಾಗುವ ಖರೀದಿ ಕೇಂದ್ರಗಳ ಮೂಲಕ ಕೃಷಿ ಉತ್ಪನ್ನಗಳಿಗೆ ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆಯಲ್ಲಿ ಖರೀದಿಗೆ ಕ್ರಮವಹಿಸಬೇಕು. >>2

# ಕೊಲೆ ಅಪರಾಧಿಗಳಿಗೆ ಶಿಕ್ಷೆ ದಂಡ : ನ್ಯಾಯಾಲಯ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**
ನಗರದ ಬ್ರೂಸ್‌ಪೇಟೆ ಠಾಣೆ ವ್ಯಾಪ್ತಿಯಲ್ಲಿ 2021 ರ ಮೇ 03ರಂದು ನಡೆದ ಇಸ್ಮಾಯಿಲ್ ಎನ್ನುವ ವ್ಯಕ್ತಿಯ ಕೊಲೆ ಪ್ರಕರಣದಲ್ಲಿ ಪಿ.ಖಾಸೀಂ, ತುಕರಾಮ ಮತ್ತು ಮೆಹಮೂದ್ ಎಂಬುವರ ಅಪರಾಧ ರುಜುವಾತ ಹಿನ್ನಲೆಯಲ್ಲಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ಮತ್ತು ದಂಡ ವಿಧಿಸಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಆದೇಶ ಹೊರಡಿಸಿದೆ.

ಎ.ಪಿ.ಎಂ.ಸಿ ಕೆಲಸಕ್ಕೆ ಹೋಗುವ ವಿಚಾರದಲ್ಲಿ ಮೃತ ಇಸ್ಮಾಯಿಲ್‌ನೊಂದಿಗೆ ಜಗಳ ತೆಗೆದುಕೊಂಡು ದೂರವಾಣಿ ಮೂಲಕ ಕಣೆಕಲ್ ಬಸ್ ನಿಲ್ದಾಣದ ಸಮೀಪ ಕರೆದು ಮಚ್ಚು ಕತ್ತಿಯಿಂದ ಮುಖಕ್ಕೆ ಮತ್ತು ತಲೆಗೆ ಹೊಡೆದು ರಕ್ತಗಾಯ ಮಾಡಿದ್ದು, ನಂತರ ಇಸ್ಮಾಯಿಲ್‌ನನ್ನು ತಪ್ಪಿಸಿಕೊಂಡು ಹೋಗದಂತೆ ಆರೋಪಿತರು ಎರಡು ಕೈಕಾಲುಗಳನ್ನು ಹಿಡಿದುಕೊಂಡು ಕಡಿದು ಕೊಲೆ ಮಾಡಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿದ್ದ >>3

## ಕನ್ನಡ ಡಿಂಡಿಮ

# ಕನ್ನಡವನ್ನು ಮನೆ ಮನೆಗೆ ತಲುಪಿಸಿದ: ಗಳಗನಾಥ

"ಒಂದು ಸಂಜೆ ಮನೆಯ ಎದುರಿಗೆ ಇದ್ದ ಶಾಲೆಯ ಬಳಿ ಕುಳಿತುಕೊಂಡು, ಎದುರು ದಿಕ್ಕಿನಿಂದ ಬರಬೇಕಾಗಿದ್ದ ಅಂದಿನ ಕೊನೆಯ ಬಸ್ಸಿನ ಪ್ರತೀಕ್ಷೆ ಮಾಡುತ್ತಿದ್ದೆ. ದಿನಕ್ಕೆ ಮೂರು ಸಾರಿ ಬಂದು ಹೋಗುತ್ತಿದ್ದ ಬಸ್ಸುಗಳೇ ನಮಗೆ ಆ ಚಿಕ್ಕ ಊರಿನ ದೊಡ್ಡ ಆಕರ್ಷಣೆಗಳಾಗಿದ್ದವು. ಬಸ್ಸು ಬಂತು, ಹೋಯಿತು. ಅದೇ ದಿಕ್ಕಿನಿಂದ ದೊಡ್ಡ ಗಂಟೊಂದನ್ನು ಹೊತ್ತುಕೊಂಡು ಮುದುಕರೊಬ್ಬರು ನಿಧಾನವಾಗಿ ನಡೆದು ಬರುತ್ತಿದ್ದರು.

ಯಾರೋ ಸೀರೇ–ಬಟ್ಟೆಗಳ ಮಾರುವವರಿರಬೇಕೆಂದು ಮನೆಯ ಹೆಂಗಸರಿಗೆ ವಿಷಯ ತಿಳಿಸಲು ಒಳಗೆ ಓಡಿದೆ. ಬಂದವರು ವ್ಯಾಪಾರಿ ನಿಜ. ಆದರೆ ಪುಸ್ತಕಗಳನ್ನು ಮಾರುವವರು. ಪುಸ್ತಕಗಳನ್ನು ಹೊತ್ತು ಮಾರುವುದು ನಾವು ಕಂಡು ಕೇಳದ ಸಂಗತಿ. ವ್ಯಾಪಾರಿಗೋ ಇಳಿ ವಯಸ್ಸು. ಮೈಯೆಲ್ಲ ಧೂಳು ಕೆಂಪು. ಪುಸ್ತಕಗಳೋ ಮಹಾಭಾರ. ಮನೆಯವರಿಗೆಲ್ಲ ಅವರಲ್ಲಿ ಸಹಾನುಭೂತಿ. ಆ ಪುಸ್ತಕಗಳನ್ನು ಬರೆದವರು ಆ ಮುದುಕರೇ! ಇದೀಗ ಆಶ್ಚರ್ಯ. ಎಲ್ಲರಲ್ಲೂ ಗೌರವ ಮೂಡಿತು. ಎಲ್ಲರೂ ಮೂಕರೇ ಆ ಹೊತ್ತು."

ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳಾದ ಡಾ.ಹಾ. ಮಾ.ನಾಯಕರು,ತಾವುಏಳೆಂಟುವರ್ಷದಬಾಲಕರಾಗಿರುವಾಗ, ತಮ್ಮೂರಿಗೆ ಪುಸ್ತಕ ಮಾರಲುಬಂದ ಗಳಗನಾಥರನ್ನು ಕಂಡ ಪರಿಯನ್ನು ಈ ರೀತಿ ಚಿತ್ರಿಸಿದ್ದಾರೆ.

ಗಳಗನಾಥರು ತಮ್ಮ ಜೀವನವನ್ನೆಲ್ಲಾ ಕಾದಂಬರಿ ರಚನೆ, ಪುಸ್ತಕ ಪ್ರಕಟಣೆ, ಶಿಕ್ಷಣ, ಪತ್ರಿಕೋದ್ಯಮಕ್ಕೆ ಮೀಸಲಿಟ್ಟರು. ಅದರ ಫಲವಾಗಿ ಕೊನೆಯ ಕಾಲದಲ್ಲಿ ಗ್ರಂಥ ಪ್ರಕಟಣೆಯ ಸಾಲದ ಹೊರೆಯಲ್ಲಿ ಸಿಲುಕಿ ಗ್ರಂಥ ಮಾರಾಟಕ್ಕಾಗಿ ಊರೂರು ಅಲೆದಾಡಿದರು. ಆದರೂ ಅವರು ಅಲುಗಾಡಲಿಲ್ಲ. ಧೃತಿಗೆಡದೆ ಕನ್ನಡಕ್ಕೆ ದುಡಿಯುತ್ತಾ, ಕಾದಂಬರಿ ಪ್ರಕಟಣೆ ಮಾಡುತ್ತಾ, ಸಂಚಾರಿ ಪುಸ್ತಕ ಮಾರಾಟಗಾರರಾಗಿ ಕನ್ನಡ ಸಾಹಿತ್ಯ ಲೋಕದ ನಕ್ಷತ್ರವಾದರು. ಅವರಿಗೆ ಸದಾ ಕಾಡುತ್ತಿದ್ದ ಬಡತನವು ಅವರನ್ನು ಸತ್ತಾಗಲೂ ಬಿಡಲಿಲ್ಲ. ಅವರು ತೀರಿಕೊಂಡಾದ ಅಂತ್ಯ ಸಂಸ್ಕಾರಕ್ಕೆ ಮತ್ತು ನಂತರದ ದಿವಸಗಳನ್ನು ಮಾಡಲು ಮನೆಯಲ್ಲಿ ಹಣವಿರಲಿಲ್ಲ. ಆಗ ಅವರ ಅಂತ್ಯ ಸಂಸ್ಕಾರಕ್ಕೆ ಬಂದವರು ಗಳಗನಾಥರ ಪುಸ್ತಕ ರಾಶಿಗಳಲ್ಲಿ ತಮಗೆ ಬೇಕಾದ ಪುಸ್ತಕಗಳನ್ನು ತೆಗೆದುಕೊಂಡು ಹಣ ನೀಡಿದರು. ಆ ರೀತಿ ಹತ್ತು ದಿನಗಳಲ್ಲಿ ಸಂಗ್ರಹವಾದ ಹಣದಿಂದಲೆ, ಅವರ ದಿವಸ ಕಾರ್ಯಕ್ರಮ ನಡೆಯಿತು ಎನ್ನುವುದನ್ನು ನೆನಸಿಕೊಂಡರೆ ಎಂತವರ ಕರುಳಾದರೂ ಚುರುಕ್ ಎನ್ನದಿರದು.

**। ಡಾ.ಪರಮೇಶ್ವರಯ್ಯ ಸೊಪ್ಪಿಮಠ**

# ಭತ್ತ ಖರೀದಿ ಕೇಂದ್ರಗಳ ಪ್ರಾರಂಭ

**(ಮೊದಲ ಪುಟದಿಂದ)**

ರೈತರ ಬೇಡಿಕೆ ಹಾಗೂ ಅನುಕೂಲಕ್ಕೆ ತಕ್ಕಂತೆ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಇದಕ್ಕೆ ಅವಶ್ಯವಿರುವ ಗ್ರೇಡರ್ ಗಳನ್ನು ನೇಮಿಸಿ. ಖರೀದಿ ಕೇಂದ್ರಗಳಿಗೆ ಸಂಬಂಧಿಸಿದ ಎ.ಪಿ.ಎಂ.ಸಿ.ಗಳಿಂದ ಮೂಲಭೂತ ಸೌಕರ್ಯ ಒದಗಿಸಬೇಕು. ಗೋದಾಮುಗಳ ಹಾಗೂ ಸಾಗಾಣಿಕೆ ವ್ಯವಸ್ಥೆಯ ಬಗ್ಗೆಯೂ ಕ್ರಮ ಕೈಗೊಳ್ಳಬೇಕು. ಈ ಯೋಜನೆಯಡಿ ರೈತರ ನೋಂದಣಿ, ಖರೀದಿ ಪ್ರಾರಂಭದ, ಖರೀದಿ ಮಿತಿ ಬಗ್ಗೆ ಜಿಲ್ಲೆಯ ರೈತರಿಗೆ ಜಾಗೃತಿ ಮೂಡಿಸಬೇಕು. ಖರೀದಿ ಕೇಂದ್ರಗಳಲ್ಲಿ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುವುದರ ಜೊತೆಗೆ ಖರೀದಿ ಪ್ರಕ್ರಿಯೆಯನ್ನು ಸುವ್ಯವಸ್ಥಿತವಾಗಿ ನಡೆಸಲು ಎಲ್ಲಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ ಅವರು ಮಾತನಾಡಿ, ಪ್ರಸಕ್ತ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್‌ಗೆ ಸಾಮಾನ್ಯ ಭತ್ತಕ್ಕೆ 2183 ಹಾಗೂ ಗ್ರೇಡ್–ಎ ಭತ್ತಕ್ಕೆ 2203 ರೂ.ಗಳ ದರ ನಿಗದಿಪಡಿಸಿದೆ. ವಿಜಯನಗರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಖರೀದಿ ಕೇಂದ್ರಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

# ಕನ್ನಡಕ್ಕೂ ಒಂದು 'ರಾಷ್ಟ್ರೀಯತೆ'?

**– ದೇವನೂರ ಮಹಾದೇವ**

("ಎದೆಗೆ ಬಿದ್ದ ಅಕ್ಷರ" ಸಂಕಲನದಿಂದ ಆಯ್ದ ಒಂದು ಬರಹ. ಮರು ಓದಿಗಾಗಿ...)



ವಾಚಕರ ವಾಣಿಯಲ್ಲಿ ನಾನೊಂದು ಪತ್ರ ಬರೆದಿದ್ದೆ– ಈ ದೇಶದಲ್ಲಿ ಬ್ರಾಹ್ಮಣರಿಗೇನೆ ಒಂದು ರಾಜ್ಯ ಕೊಟ್ರೂವೆ ಅಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಮತ್ತಿನ್ಯಾವುದೋ ಹುಟ್ಕಂಡು ನೂರೆಂಟು ಭಿನ್ನಾಭಿಪ್ರಾಯಗಳು ಆ ಬ್ರಾಹ್ಮಣರ ರಾಜ್ಯದಲ್ಲೇ ಬರುತ್ತೆ. ಅಲ್ಲಿ ಜರುಗುವ ವಾಗ್ವಾದ, ಗೇಲಿ, ಅವಹೇಳನ, ಆತ್ಮಹತ್ಯೆಗಳು ಆ ರಾಜ್ಯದ ಸಹಜ ಕ್ರಿಯೆಗಳಾಗಬಹುದು. ಹಾಗೇನೆ ದಲಿತರಿಗೇನೆ ಒಂದು ರಾಜ್ಯ ಕೊಟ್ಟರೂನು ಅಲ್ಲೂ ಕೂಡಾ ಬಲಗೈ, ಎಡಗೈ, ಎಡಗೈನ ಹೆಬ್ಬೆರಳು, ಬಲಗೈನ ಹೆಬ್ಬೆರಳು ಅಥವಾ ಕಿರುಬೆರಳು ಹಿಂಗೆ ವಿವಾದ, ಜಗಳ, ಮತ್ತೆ ಕೊಲೆಗಳು ಈ ರಾಜ್ಯದ ದಿನನಿತ್ಯ ಜರುಗುವ ಕ್ರಿಯೆಗಳಾಗಬಹುದು.

ಇದು ಯಾಕೆಂದರೆ ಸಮಾನತೆ ಹಾಗೂ ಸಹಬಾಳ್ವೆ ನಮಗೆ ರೂಢಿಯಾಗಿಲ್ಲ. ಅಸಮಾನತೆ ಮತ್ತು ಅಸಹಾಯಕ ಸಹಬಾಳ್ವೆ ರೂಢಿಯಾಗಿಬಿಟ್ಟಿದೆ. ಸಮಾನತೆ ಹಾಗೂ ಸಹಬಾಳ್ವೆ ಅಭ್ಯಾಸ ಮಾಡಿ ರೂಢಿಸಿಕೊಳ್ಳಬೇಕಾದ ಕ್ರಿಯೆಯಾಗಿದೆ. ಇದು ಕಷ್ಟ, ಯಾಕೆಂದರೆ ಎಲ್ಲೆಲ್ಲೂ ಬಣ್ಣ, ಭಾಷೆ, ಜಾತಿ, ಮತ, ಗಂಡು, ಹೆಣ್ಣು ಹೀಗೆ ಭಿನ್ನ ಭಾವದ ಪೂರ್ವಿಕರಭಿನ್ನಭಾವದಕಟ್ಟಿಟ್ಟಬುತ್ತಿಉಣ್ಣುತ್ತಿದ್ದೇವೆ.ತಲತಲಾಂತರದಿಂದ ಇದು ಹರಿದು ಬಂದಿದ್ದಾದ್ದರಿಂದ ಒಬ್ಬ ವ್ಯಕ್ತಿ ಪ್ರಜ್ಞಾಪೂರ್ವಕವಾಗಿ ತನ್ನ ಸುಪ್ತ ಮನಸ್ಸನ್ನು ನೋಡಿಕೊಂಡು ಎಚ್ಚರವಹಿಸಿ ಈ ಸುಳಿಯಿಂದ ಪಾರಾಗಬೇಕಾಗಿದೆ. ಹಾಗಾಗಿಯೇ ಇದು ಕಷ್ಟ, ನಿಜ, ಆದರೆ ಅಸಾಧ್ಯವಲ್ಲ. ಉದಾ: ಹಿಂದೆ ಒಂದ್ಹೆಣ್ಣು ಐದ್ಗಂಡು ಇತ್ತು. ಅಂದ್ರೆ ಒಂದು ಹೆಣ್ಣು ಐದಾರು ಗಂಡನ್ನು ಮದ್ವೆಯಾಗೋ ಪದ್ಧತಿ ಇತ್ತು. ಅದನ್ನು ಬಿಟ್ಟು ಆಮ್ಯಾಲೆ ಒಂದ್ಗಂಡು ಐದಾರ್ಹೆಣ್ಣು ಅಥವಾ ಎಷ್ಟೆಷ್ಟೋ ಹೆಣ್ಣುಗಳನ್ನು ಮದ್ವೆ ಆಗೋದು ಬಂತು. ಈಗ ಅದನ್ನೂ ಬಿಟ್ಟು ಒಂದು ಗಂಡಿಗೆ ಒಂದು ಹೆಣ್ಣು ಪಳಗಿಸಿಕೊಳ್ಳುತ್ತಿದ್ದೇವೆ. ಇದೇ ಥರಾನೆ ಸಮಾನತೆ ಮತ್ತು ಸಹಬಾಳ್ವೆಗೂ ನಾವು ಪಳಗಬೇಕಾಗಿದೆ.

ಅದಕ್ಕಾಗಿ ಪು.ತಿ.ನ ಅವರ ಒಂದು ಮಾತನ್ನು ನೆನಪಿಸುವೆ– 'ದೇಶ ಅಂದ್ರೆ ಏನನ್ಕೊಂಡ್ಬಿಟ್ಟಿದ್ದೀರಯ್ಯಾ? ಅದೇನು ಮಣ್ಣಾ ಕಲ್ಲಾ, ಮರಗಿಡ್ಗಳಾ? ಜನ, ದೇಶ ಅಂತಂದ್ರೆ ಜನ'. ಈ ನುಡಿಯು ಹಣತೆ ಬೆಳಕಿನಂತಿದೆ. ಈ ಎಳೆ ಹಿಡಿದು ನಾವು ಉಳಿಯಬಹುದು.

ಒಂದು ಪ್ರದೇಶದಲ್ಲಿ ಅಲ್ಲಿ ಮನುಷ್ಯರೇ ಇಲ್ಲದಿದ್ದರೆ ಅದು ದೇಶ ಅನ್ನಿಸಿಕೊಳ್ಳುವುದಿಲ್ಲ. ಆ ಪ್ರದೇಶದಲ್ಲಿ ವಾಸಿಸುವ ಜನರ ಮೊತ್ತವೇ ದೇಶ ಅನ್ನಿಸಿಕೊಂಡರೆ ಆಗ ಅಲ್ಲಿನ ಪ್ರತಿಯೊಂದು ಜೀವಕ್ಕೂ ಬೆಲೆ ಬರುತ್ತಿತ್ತು. ಆಗ ಅಲ್ಲಿ ಅಸ್ಪೃಶ್ಯತೆ, ಜಾತಿ ಮತ, ಭಾಷೆಗಾಗಿ ಇಷ್ಟೊಂದು ರಕ್ತ ಸುರಿಯುತ್ತಿರಲಿಲ್ಲವೇನೊ.

ಪಂಜಾಬ್ ಪ್ರತ್ಯೇಕತೆಯ ಬೆಂಕಿಯಲ್ಲಿ ಉರಿಯುತ್ತಿದೆ. ಅಲ್ಲಿನ ಜನ ತುಂಬಾ ಒಳ್ಳೆಯವರು, ಶ್ರಮಜೀವಿಗಳು, ಸರಳವಾದವರು. ಇಂಡಿಯಾ ಐವತ್ತು ವರ್ಷ ಕಷ್ಟಪಟ್ಟರೆ ಪಂಜಾಬ್ ಮಟ್ಟಕ್ಕೆ ಹೋಗಬಹುದು ಅಷ್ಟು ಸಂತೃಪ್ತವಾದ ರಾಜ್ಯ. ಪ್ರತ್ಯೇಕತೆಯ ಕಿಡಿಯಿಂದ ಅಲ್ಲಿ ಹೊಡೆದಾಟ, ಬಡಿದಾಟ, ಸಾವು–ನೋವು ಉಂಟಾಯ್ತು. ಅಂಥ ಸಂಪತ್ತಿನ ರಾಜ್ಯದಲ್ಲೇ ಈ ಕತೆಯಾದರೆ ಇದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ಇನ್ನು ಭಾಷೆ ಬಗ್ಗೆ ಮಾತಾಡೋದಾದ್ರೆ ಇದು ಧರ್ಮಕ್ಕಿಂತ ಕಮ್ಮಿ ಅಪಾಯಕಾರಿಯಾದರೂ, ಇಂಥ ಯಾವುದನ್ನೇ ಹಿಡ್ಕಂಡು ಹೊರಟರೂ ಹುಲಿ ಸಾವರಿ ಮಾಡ್ದಂಗೇ ಆಗುತ್ತೆ. ಭಾಷೆಯನ್ನು ಆಡಳಿತ ಮತ್ತು ಜನಗಳ ನಡುವೆ ಅಂತರ ಕಮ್ಮಿ ಮಾಡಲು ಇರುವ ಒಂದು ಗೆರೆಯಂತೆ ನೋಡಿದರೆ ಕ್ಷೇಮ. ಅದಕ್ಕಿಂತ ಹೆಚ್ಚು ಅನ್ಕಂಡ್ರೆ ಅದಕ್ಕೆ ಕಣ್ಣು ಕಾಣಲ್ಲ, ಕಿವಿ ಕೇಳ್ಸಲ್ಲ. ಕನ್ನಡ ನಾಡನ್ನು ಎರಡು ಕೋಟಿಗೊಂದು ರಾಜ್ಯದ ಥರ ಮೂರು ರಾಜ್ಯ ಮಾಡೋದಾದ್ರೆ ಅದರಿಂದ ಒಳ್ಳೆಯ ಆಡಳಿತ ಸಿಕ್ಕಿ ಜನರ ಜೀವನ ಮಟ್ಟ ಹೆಚ್ಚುವುದಾದರೆ ಯಾಕಾಗಬಾರದು? ಅಥವಾ ಸಾಮಾಜಿಕ ನ್ಯಾಯವನ್ನು ಎಚ್ಚರವಾಗಿ ಅಳವಡಿಸಿಕೊಂಡು, ಜಿಲ್ಲೆಗಳನ್ನೇ ಅಧಿಕಾರ ಕೇಂದ್ರ ಮಾಡಿ ರಾಜ್ಯವನ್ನು ಸಮನ್ವಯ ಆಡಳಿತ ಸಂಸ್ಥೆಯನ್ನಾಗಿಸಿದರೆ ಅಂದರೆ– ವಿಕೇಂದ್ರೀಕರಣದತ್ತ ಒಂದು ಹೆಜ್ಜೆ– ಇದೇ ಪ್ರಾದೇಶಿಕ ತಾರತಮ್ಯ ಹೋಗಲಾಡಿಸಲು ಮದ್ದಾಗುವುದಿಲ್ಲವೆ? ರಾಜ್ಯ ಮತ್ತು ಜಿಲ್ಲೆಗಳ ವಿಂಗಡನೆಯನ್ನು ಆಯಾಯ ಪ್ರದೇಶದ ಪ್ರಮುಖ ಬೆಳೆ ಆದರಿಸಿ ವಿಂಗಡಿಸುವುದು ಒಳ್ಳೆಯದೇನೊ. ಇಂಥವುಗಳಿಂದ ಸ್ವಲ್ಪ ಮಟ್ಟಿಗೆ ಪ್ರತ್ಯೇಕತಾ ಪ್ರವೃತ್ತಿಯನ್ನು ಮೊಟಕುಗೊಳಿಸಿದಂತೆ ಆಗಬಹುದು. ಜೊತೆಗೆ ಮನುಷ್ಯ ಮನುಷ್ಯರ ನಡುವೆ ದೂರ ಕಮ್ಮಿಯಾಗಿಸುವತ್ತ, ಇದರ ಜೊತೆಗೆ, ನಮ್ಮ ಜಾತಿಪದ್ಧತಿಯಿಂದಾಗಿ ಒಂದು ಹಳ್ಳಿ ಒಳಗೇನೆ ಒಬ್ಬ ಮೇಲ್ಜಾತಿ ಅನ್ನಿಸಿಕೊಂಡವನಿಗೂ, ಕೆಳಜಾತಿ ಅನ್ನಿಸಿಕೊಂಡವನಿಗೂ ಇರೋ ದೂರವು ಹಳ್ಳಿಗೂ, ದಿಲ್ಲಿಗೂ ಇರುವಷ್ಟಾಗುತ್ತಿದ್ದು ಈ ದೂರವನ್ನೂ ಕಮ್ಮಿ ಮಾಡುವತ್ತಲೂ ನಮ್ಮ ನಡಿಗೆ ಇರಬೇಕು.

ಈಗ ಕುಣಿದು ಕುಪ್ಪಳಿಸುತ್ತಿರುವ ಜಾಗತೀಕರಣ ಕೂಡ ಜನ ಆಧಾರಿತವಾದರೆ ಅಂದರೆ, ಆಸ್ಟ್ರೇಲಿಯಾ ಖಾಲಿಯಿದೆಯಪ್ಪ, ಅಲ್ಲಿಗೆ ಒಂದು ಹಂತದವರೆಗೆ ಯಾವ ದೇಶದವರೇ ವಾಸಿಸಲು ಹೋಗಿ ಅಲ್ಲಿನವರಾದರೆ ಅದೇ ಜಾಗತೀಕರಣ. ವಸ್ತು ಓಡಾಟ, ವ್ಯಾಪಾರ ಜಾಗತೀಕರಣ ಅಲ್ಲ. ಇಂದಿನ ವ್ಯಾಪಾರೀ ಜಾಗತೀಕರಣ ಯುದ್ಧವಲ್ಲದೇ ಮತ್ತೇನು ಅಲ್ಲ. ಇದೊಂದು ನವ ಯುದ್ಧ. ಆಯುಧವನ್ನು ಬಳಸದೇ ಇರುವ ಯುದ್ಧ. ಆದರೆ ಈ ವ್ಯಾಪಾರಿ ಜಾಗತೀಕರಣದ ಕುಣಿದಾಟ ಹಾರಾಟ ಮುಗಿದ ಮೇಲೆ ಏನೇನು ಕಾಣುತ್ತೇವೆ? ಒಂದು ಯುದ್ಧ ಮುಗಿದ ಮೇಲೆ ಏನೇನು ಫಲಿತಾಂಶಗಳು ಪರಿಣಾಮಗಳೂ ಉಂಟಾಗಬಹುದೊ ಅದೆಲ್ಲಾ ಕಾಣುತ್ತದೆ– ನಿರುದ್ಯೋಗ, ಬಡತನ, ಬಡವ–ಬಲ್ಲಿದರ ನಡುವೆ ಅಂತರ, ಆಹಾರ ಅಭಾವ ಇತ್ಯಾದಿ. ಹೀಗಿದ್ದೂ ಇದು 'ವ್ಯಾಪಾರ'ವೇ? ಇದು ವ್ಯಾಪಾರವಲ್ಲ. ಈ ವ್ಯಾಪಾರಿ ಜಾಗತೀಕರಣ ಅಂದರೆ ಸದ್ದಿಲ್ಲದ ಯುದ್ಧಗಳ ತಾಯಿ. ಈಗ ನಾವು ಜೀವ ಕೈಲಿಡಿದುಕೊಂಡು ಉಳಿಯುವ ಉಪಾಯಗಳನ್ನು ಹುಡುಕಬೇಕಾಗಿದೆ.

# ಅವರವರ ಅಭಿಪ್ರಾಯಗಳು.... ಅವರವರದು




ಆತನೋರ್ವ ಅತ್ಯುತ್ತಮ ಕೆಲಸಗಾರ. ಅತ್ಯಂತ ಸಜ್ಜನ ಮತ್ತು ಸ್ವಭಾವತಃ ಧರ್ಮಭೀರುವಾಗಿದ್ದನು.. ಆತನ ಬಗ್ಗೆ ಎಲ್ಲೆಡೆ ಒಳ್ಳೆಯ ಪ್ರಶಂಸೆ ಕೇಳಿ ಬರುತ್ತಿತ್ತು. ಇದರಿಂದ ಆತನಿಗೆ ಸಂತಸವಾಗುತ್ತಿತ್ತಲ್ಲದೇ ಇನ್ನೂ ಹೆಚ್ಚಿನ ಒಳ್ಳೆಯ ಕೆಲಸಗಳನ್ನು ಮಾಡಲು ಈ ಪ್ರಶಂಸೆಗಳು ಪ್ರೇರಣೆ ನೀಡುತ್ತಿದ್ದವು. ಇಷ್ಟೇ ಆದರೆ ಕಥೆ ಇಲ್ಲಿಗೆ ಮುಗಿಯಬೇಕು ಆದರೆ ಹಾಗಾಗಲಿಲ್ಲ,!

ಒಂದು ದಿನ ಆತ ಹೊಲದಿಂದ ಮನೆಗೆ ಮರಳುವಾಗ ಮರದಡಿಯಲ್ಲಿ ಕುಳಿತ ಕೆಲವು ಜನರು ತನ್ನೆಡೆ ಕೈ ಮಾಡಿ ಮಾತನಾಡುವುದನ್ನು ಕಂಡ ಹತ್ತಿರ ಹೋಗಿ ಕೇಳಿದಾಗ ಅವರು ಆತ ಅತ್ಯಂತ ಸೊಕ್ಕಿನ ಮನುಷ್ಯ, ತನ್ನದೇ ಸರಿ ಎಂಬ ವ್ಯಕ್ತಿತ್ವವನ್ನು ಹೊಂದಿದಾತ, ಅಹಂಭಾವಿ ಎಂದು ಬೈದುಕೊಳ್ಳುತ್ತಿದ್ದರು. ಇದರಿಂದ ಆತನಿಗೆ ಆಘಾತವಾಯಿತು. ಇಷ್ಟು ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿರುವ ನನ್ನ ಬಗ್ಗೆ ಇವರು ಹೀಗೆ ಮಾತನಾಡಿಕೊಳ್ಳುವುದು ತರವೇ ಎಂದು ಮಾನಸಿಕವಾಗಿ ನೊಂದನು.

ಪರಿಣಾಮವಾಗಿ ಯಾರೇ ನಾಲ್ಕು ಜನರು ಕುಳಿತು ಮಾತನಾಡುತ್ತಿದ್ದರೂ ಆತನಿಗೆ ತನ್ನ ಬಗ್ಗೆ ಕೆಟ್ಟದಾಗಿ ಮಾತನಾಡಿಕೊಳ್ಳುತ್ತಿದ್ದಾರೆ ಎಂಬಂತೆ ಭಾಸವಾಗುತ್ತಿತ್ತು. ಹಾಗೆ ಯಾರಾದರೂ ನಾಲ್ಕು ಜನರು ಕುಳಿತು ಮಾತನಾಡುವುದನ್ನು ಕಂಡಾಗಲೆಲ್ಲ ಅವರು ತನ್ನ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದಾರೆ ಎಂದು ಹಾಗೆ ಜನರ ಗುಂಪನ್ನು ನೋಡಿದಾಗಲೆಲ್ಲ ಆತನಿಗೆ ಮಾನಸಿಕ ತೊಂದರೆಯಾಗಿ..... ಈ ಮಾನಸಿಕ ಅಸ್ವಸ್ಥತೆಯು ಆತನಲ್ಲಿ ದೈಹಿಕ ಬಳಲಿಕೆಯನ್ನು ಕೂಡ ಬಳುವಳಿಯಾಗಿ ನೀಡಿತು. ಆತನ ಮಡದಿ ಹಲವಾರು ರೀತಿಯಲ್ಲಿ ಆತನನ್ನು ಸಾಂತ್ವನಿಸಲು ಪ್ರಯತ್ನಿಸಿದಳು. ಆದರೂ ಆಕೆಯ ಪ್ರಯತ್ನ ನಿಷ್ಫಲವಾಯಿತು.ಇದರಿಂದ ನೊಂದ ಆಕೆ ಹತ್ತಿರದ ಹಳ್ಳದ ದಂಡೆಯಲ್ಲಿರುವ ದೇವಸ್ಥಾನದ ಸ್ವಾಮೀಜಿಗಳ ಬಳಿ ಪರಿಹಾರ ಕೇಳಿ ಬರಲು ಕಳುಹಿಸಿದಳು.

ಹಾಗೆ ಆತ ಪರಿಹಾರ ಕೇಳಲು ಹೋದಾಗ ಸ್ವಾಮೀಜಿಗಳು ಆ ದಿನ ರಾತ್ರಿ ಆತನಿಗೆ ಅಲ್ಲಿಯೇ ಉಳಿದುಕೊಳ್ಳಲು ಹೇಳಿದರು. ಮಠದ ದಾಸೋಹಭವನದಲ್ಲಿ ಪ್ರಸಾದ ಸ್ವೀಕರಿಸಿದ ಆತ ಮಠದ ವ್ಯವಸ್ಥಾಪಕರು ನೀಡಿದ ಕೋಣೆಯಲ್ಲಿ ರಾತ್ರಿ ಮಲಗಿದ. ಹತ್ತಿರದ ಹಳ್ಳದ ಕಡೆಯಿಂದ ಒಂದೇ ಸಮನೆ ಕಪ್ಪೆಗಳ ವಟರ್ ವಟರ್ ಎಂಬ ಶಬ್ದ ರಾತ್ರಿಯೆಲ್ಲ ಆತನನ್ನು ನಿಶ್ಚಿಂತನಾಗಿ ಮಲಗಲು ಬಿಡಲಿಲ್ಲ.

ಮರುದಿನ ಮುಂಜಾನೆ ನಿತ್ಯ ವಿಧಿಗಳನ್ನು ಪೂರೈಸಿ ಸ್ವಾಮೀಜಿಯವರ ದರ್ಶನಕ್ಕೆ ಆತ ಬಂದು ಕುಳಿತಾಗ ಸ್ವಾಮಿಗಳು ರಾತ್ರಿ ಚೆನ್ನಾಗಿ ನಿದ್ದೆಯಾಯಿತೆ,?? ಎಂದು ಕೇಳಿದರು. ಅದಕ್ಕೆ ಉತ್ತರಿಸುತ್ತಾ ಆ ವ್ಯಕ್ತಿ ಅಯ್ಯೋ ಸ್ವಾಮಿ, ರಾತ್ರಿಯೆಲ್ಲ ಹಳ್ಳದ ದಂಡೆಯಲ್ಲಿರುವ ಸಾವಿರಾರು ಕಪ್ಪೆಗಳ ವಟವಟ ಶಬ್ದದಿಂದ ನಿದ್ದೆಯೇ ಇಲ್ಲದಂತಾಯಿತು ಎಂದು ಹೇಳಿದನು.

ನಸುನಕ್ಕ ಸ್ವಾಮೀಜಿ ಈ ಜಾಗದ ಸಮಸ್ಯೆಯೇ ಅಂತಹದ್ದು ನಿನ್ನ ಕೆಲವು ಜೊತೆಗಾರರನ್ನು ಕರೆದುಕೊಂಡು ಬಂದು ಆ ಕಪ್ಪೆಗಳನ್ನು ಇಲ್ಲಿಂದ ತೆಗೆಸುವೆಯಾ, ನಮಗೂ ತೊಂದರೆಯಾಗುತ್ತಿದೆ ಎಂದು ಕೇಳಿದರು. ಇದಕ್ಕೆ ಒಪ್ಪಿದ ಆ ಸಜ್ಜನ ವ್ಯಕ್ತಿ ಒಂದೆರಡು ದಿನಗಳಲ್ಲಿ ತನ್ನ ಸ್ನೇಹಿತರೊಂದಿಗೆ ಬಂದು ಕಪ್ಪೆಗಳನ್ನು ಅಲ್ಲಿಂದ ತೆರವು ಮಾಡಲು ಹೋದನು ಆದರೆ ಏನು ಆಶ್ಚರ್ಯ!! ಅಲ್ಲಿದ್ದದ್ದು ಕೇವಲ 50–60 ಕಪ್ಪೆಗಳು ಮಾತ್ರ.

ಆ ಕಪ್ಪೆಗಳನ್ನು ತೆರವು ಮಾಡಿ ಬಂದ ಸಜ್ಜನ ವ್ಯಕ್ತಿ ಸ್ವಾಮೀಜಿಗಳಿಗೆ ನಮಸ್ಕರಿಸಿ ಹೇಳಿದನು.... ಗುರುಗಳೇ ಅಲ್ಲಿದ್ದದ್ದು ಕೇವಲ 50–60 ಕಪ್ಪೆಗಳು ಮಾತ್ರ, ನೀವು ಹೇಳಿದಂತೆ ಸಾವಿರಾರು ಕಪ್ಪೆಗಳಲ್ಲ. ಆಗ ಗುರುಗಳು ನಾನೆಲ್ಲಿ ಸಾವಿರಾರು ಕಪ್ಪೆಗಳೆಂದು ಹೇಳಿದೆ. ನೀನೇ ಹೇಳಿದ್ದು.ಕೆಲವೇ ಕಪ್ಪೆಗಳು ಒಟಗುಡುತ್ತಿರುವುದು ನಿನಗೆ ಸಾವಿರಾರು ಕಪ್ಪೆಗಳಂತೆ ತೋರುತ್ತದೆ. ಕೆಲ ಕಪ್ಪೆಗಳಿಗೆ ವಟಗುಡುವುದೇ ಕೆಲಸ. ಅವುಗಳನ್ನು ಅವುಗಳ ಪಾಡಿಗೆ ಬಿಟ್ಟುಬಿಡಬೇಕು. ಹಾಗೆಯೇ ನಿನ್ನ ಕುರಿತು ಮಾತನಾಡುತ್ತಿರುವವರು ಕೆಲವೇ ಜನ, ಅದು ಅವರ ಅಭಿಪ್ರಾಯ. ಎಲ್ಲರ ಅಭಿಪ್ರಾಯಗಳನ್ನು ನೀನೇಕೆ ನಿನ್ನ ಮೇಲೆ ಹೇರಿಕೊಳ್ಳಬೇಕು. ಯಾರೋ ಕೆಲವರು ನಿನ್ನ ಬಗ್ಗೆ ಮಾತನಾಡುತ್ತಾರೆ ಎಂದ ಮಾತ್ರಕ್ಕೆ ಎಲ್ಲರೂ ನಿನ್ನ ಬಗ್ಗೆ ಮಾತನಾಡುತ್ತಾರೆ ಎಂದು ತಿಳಿದುಕೊಳ್ಳುವುದು ಶುದ್ಧ ತಪ್ಪು. ಈಗಲಾದರೂ ಗೊತ್ತಾಯಿತೇ,?? ಎಂದು ಮರು ಪ್ರಶ್ನಿಸಿದರು. ಗುರುಗಳ ಮಾತಿನ ಮರ್ಮವನ್ನು ಅರಿತ ಆ ಸಜ್ಜನ ವ್ಯಕ್ತಿಯ ಮನಸ್ಸು ನಿರಾಳಗೊಂಡಂತಾಗಿ, ಮುಖದಲ್ಲಿ ನಸುನಗು ಹೊತ್ತು ಗುರುಗಳ ಕಾಲಿಗೆ ಬಿದ್ದು ನಮಸ್ಕರಿಸಿದನು.

ಅಂತೆಯೇ ಮನುಷ್ಯರು ಕೂಡ. ಎಲ್ಲರನ್ನೂ ಎಲ್ಲಾ ಕಾಲದಲ್ಲಿಯೂ ಮೆಚ್ಚಿಸಲು ಸಾಧ್ಯವಿಲ್ಲ. ಮೊಸರಿನಲ್ಲಿಯೇ ಕಲ್ಲನ್ನು ಹುಡುಕುವ ಜನರಿರುವ ಕಾಲದಲ್ಲಿ ಓರ್ವ ವ್ಯಕ್ತಿಯನ್ನು ವಿವಿಧ ಕೋನಗಳಿಂದ ತಮಗೆ ಬೇಕಾದಂತೆ ಪರಾಮರ್ಶಿಸುವ ಜನರು ಇದ್ದೇ ಇರುತ್ತಾರೆ. ಅದು ಅವರ ಅಭಿಪ್ರಾಯ, ಅವರ ಅಭಿಪ್ರಾಯವೆಂದಿಗೂ ನಮ್ಮ ಅಭಿಪ್ರಾಯವಾಗಬಾರದು. ನಮ್ಮ ಕುರಿತು ಮಾತನಾಡುವವರು ನಮ್ಮ ಒಳ್ಳೆಯದಕ್ಕೆ ಹೇಳಿದ್ದರೆ ಅದನ್ನುಪರಾಮರ್ಶಿಸಿನಮ್ಮನ್ನುನಾವುತಿದ್ದಿಕೊಳ್ಳಬಹುದು, ಅಕಸ್ಮಾತ್ ನಮ್ಮನ್ನು ಹೀಯಾಳಿಸಲೆಂದೇ ಅವರು ಹೇಳುತ್ತಿದ್ದರೆ ಅವರನ್ನು ಮತ್ತು ಅವರ ಅಭಿಪ್ರಾಯಗಳನ್ನು ದೂರವಿರಿಸುವುದು ನಮ್ಮ ಮಾನಸಿಕ ಆರೋಗ್ಯಕ್ಕೆ ಅತ್ಯಂತ ಶ್ರೇಯಸ್ಕರ. ನಿಜ ಅಲ್ಲವೇ ಸ್ನೇಹಿತರೇ??

**ವೀಣಾ ಹೇಮಂತ್ ಗೌಡ ಪಾಟೀಲ್,**
**ಮುಂಡರಗಿ. ಗದಗ**

# ರಸಾಯನಿಕ ಘಟಕಕ್ಕೆ ಅಧಿಕಾರಿಗಳು ಭೇಟಿ

## ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಂದ ಬೃಹತ್ ಔಷಧಿ ಉತ್ಪಾದನಾ ಸ್ಥಳ ಪರಿಶೀಲನೆ | ಸಾರ್ವಜನಿಕರಿಂದ ದೂರು

■ **ಹಂಪಿ ಟೈಮ್ಸ್ ಬಳ್ಳಾರಿ :**
ಬಳ್ಳಾರಿಯ ಮುಂಡ್ರಗಿ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ರಸಾಯನಿಕ (ಔಷಧ) ಘಟಕಗಳು ನಿಯಮ ಬಾಹಿರವಾಗಿ ಉತ್ಪಾದನೆ ನಡೆಸುತ್ತಿರುವ ಸ್ಥಳಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಾರ್ಮಿಕ ಸಚಿವ ಎಸ್.ಸಂತೋಷ ಲಾಡ್ ಅವರು ಬಳ್ಳಾರಿಗೆ ಭೇಟಿ ಮಾಡಿ, ಜಿಲ್ಲಾಧಿಕಾರಿಳ ನೇತೃತ್ವದಲ್ಲಿ ನಡೆಸಿದ ಸಭೆಯಲ್ಲಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ. ಮಹಾರುದ್ರಗೌಡ ಮತ್ತು ಪದಾಧಿಕಾರಿಗಳು ದೂರು ಸಲ್ಲಿಸಿ, ಮುಂಡ್ರಿಗಿ ಕೈಗಾರಿಕಾ ಪ್ರದೇಶದಲ್ಲಿಯ 'ಬೃಹತ್ ಔಷಧ ಘಟಕಗಳ' ಕಾನೂನು ಬಾಹಿರ ಉತ್ಪಾದನೆಯ ಸಮಸ್ಯೆಗಳ ಕುರಿತು ಸಮಗ್ರವಾಗಿ ವಿವರಿಸಿ, ಸಾರ್ವಜನಿಕರ ಆರೋಗ್ಯ ಸಂರಕ್ಷಣೆಗೆ ಅಗತ್ಯ ಕ್ರಮಕೈಗೊಳ್ಳಲು ಮನವಿ ಸಲ್ಲಿಸಿದ್ದರು.



ಈ ಹಿನ್ನಲೆಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯ ಅಧಿಕಾರಿಗಳಾದ ಸಹಾಯಕ ನಿರ್ದೇಶಕ ವರುಣ್ ಕುಮಾರ್, ಪರಿಸರ ಅಧಿಕಾರಿ ದೊಡ್ಡಬಸಯ್ಯ ಮತ್ತು ಜಿಲ್ಲಾ ಕೈಗಾರಿಕಾ ಅಧಿಕಾರಿ ಸೋಮಶೇಖರ್ ನೇತೃತ್ವದಲ್ಲಿ ಅಧಿಕಾರಿಗಳ ತಂಡವು, ಮುಂಡ್ರಗಿ ಕೈಗಾರಿಕಾ ವಲಯಕ್ಕೆ ಗುರುವಾರ ಭೇಟಿ ನೀಡಿತ್ತು.

ಅಧಿಕಾರಿಗಳ ಜೊತೆಯಲ್ಲಿದ್ದ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ. ಮಹಾರುದ್ರಗೌಡ, ಉಪಾಧ್ಯಕ್ಷ ದೊಡ್ಡನಗೌಡ, ಜಂಟಿ ಕಾರ್ಯದರ್ಶಿ ವಿ. ರಾಮಚಂದ್ರ ಅವರು ಸುದ್ದಿಗಾರರ ಜೊತೆ ಮಾತನಾಡಿ, ರಸಾಯನಿಕ (ಔಷಧ) ಘಟಕಗಳ ಆಡಳಿತ ಮಂಡಲಿಯು ಎಲ್ಲವನ್ನೂ ಸರಿಪಡಿಸಲು ಸಮಯಾವಕಾಶ ಕೋರಿದ್ದಾರೆ ಎಂದರು.

ಮುಂಡ್ರಗಿ ಕೈಗಾರಿಕೆಯ ಪ್ರದೇಶದಲ್ಲಿ ಬೃಹತ್ ಔಷಧ ಘಟಕದವರು ನಿಯಮಗಳನ್ನು ಉಲ್ಲಂಘನೆ ಮಾಡಿ ಉತ್ಪಾದನೆ ಮಾಡುತ್ತಿರುವ ಕಾರಣ ಸುತ್ತಲಿನ ಪ್ರದೇಶದಲ್ಲಿರುವವರು ಅಸ್ತಮ, ಚರ್ಮ ಅಲರ್ಜಿ, ಅಜೀರ್ಣ ಸಮಸ್ಯೆ, ಕಣ್ಣುಉರಿ, ಕಿಡ್ನಿ ಮತ್ತು ಹೃದಯ ಸಮಸ್ಯೆಗಳಿಂದ ನರಳುತ್ತಿದ್ದಾರೆ. ರಸಾಯನಿಕ ಫ್ಯಾಕ್ಟರಿಗಳ ಧೂಳಿನಿಂದಾಗಿ ಸುತ್ತಲಿನ ಕೈಗಾರಿಕಾ ಘಟಕಗಳ ಶೆಡ್ಡುಗಳು ತ್ವರಿತವಾಗಿ ಹಾಳಾಗುತ್ತಿವೆ ಎಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ. ಮಹಾರುದ್ರಗೌಡ ಅವರು ಕೈಗಾರಿಕೆಗಳ ಪರವಾಗಿ ಸಚಿವರಲ್ಲಿ ದೂರು ಸಲ್ಲಿಸಿ, ಅಗತ್ಯ ಕ್ರಮಕೈಗೊಳ್ಳಲು ಮನವಿ ಮಾಡಿದ್ದನ್ನು ಸ್ಮರಿಸಬಹುದಾಗಿದೆ. ಬಳ್ಳಾರಿ ಜಿಲ್ಲಾ ಕಾಟನ್ ಅಸೋಸಿಯೇಷನ್‌ನ ಪದಾಧಿಕಾರಿಗಳು ಮತ್ತು ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಬಳ್ಳಾರಿಯಲ್ಲಿ 16 ರಿಂದ 24ರವರೆಗೆ ಕರ್ನಾಟಕ ಸಂಭ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ :**
ನಮ್ಮ ರಾಜ್ಯ ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷ ಪೂರೈಸಿರುವ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಕರ್ನಾಟಕ ಸಂಭ್ರಮ-50ರ ರಥಯಾತ್ರೆಯು ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ನ.16 ರಿಂದ 24ರವರೆಗೆ ಸಂಚರಿಸಲಿದ್ದು, ಈ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರಾ ಅವರು ಹೇಳಿದರು.

ಜಿಲ್ಲೆಯಲ್ಲಿ ಕರ್ನಾಟಕ ಸಂಭ್ರಮ-50ರ ರಥಯಾತ್ರೆ ಸಂಚಾರ ಕುರಿತಂತೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕನ್ನಡಪರ ಸಂಘಟನೆಗಳುಹಾಗೂಜಿಲ್ಲಾಮಟ್ಟದಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವವನ್ನು ವರ್ಷವಿಡಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿದ್ದು, ಕರ್ನಾಟಕ ಸಂಭ್ರಮ-50ರ ರಥಯಾತ್ರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದ್ದಾರೆ. ನ.16ರಂದು ಬಳ್ಳಾರಿ ಜಿಲ್ಲೆಗೆ ಆಗಮಿಸಲಿದ್ದು, ಒಂದು ವಾರಗಳ ಕಾಲ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಸಂಚರಿಸಲಿದೆ. ಜಿಲ್ಲಾ ಹಾಗೂ ತಾಲ್ಲೂಕುಗಳ ಮಟ್ಟದಲ್ಲಿ ರಥಯಾತ್ರೆಯ ಅದ್ದೂರಿ ಸ್ವಾಗತಕ್ಕೆ ಪೂರ್ವತಯಾರಿ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕರ್ನಾಟಕ ಸಂಭ್ರಮ-50ರ ರಥಯಾತ್ರೆಯು ನ.16ರಂದು ಸಂಡೂರು ತಾಲ್ಲೂಕಿನ ಬಂಡ್ರಿ ಗ್ರಾಮಕ್ಕೆ ಆಗಮಿಸಲಿದೆ. ಅಲ್ಲಿ ಶಾಸಕರು, ತಹಶೀಲ್ದಾರರು, ತಾಪಂ ಇಒ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಅದ್ದೂರಿಯಾಗಿ ಸ್ವಾಗತಿಸುವರು ಎಂದು ತಿಳಿಸಿದ ಅಪರ ಜಿಲ್ಲಾಧಿಕಾರಿಗಳು, ಸಂಡೂರು ತಾಲ್ಲೂಕಿನಲ್ಲಿ ವಿವಿಧೆಡೆ ಸಂಚರಿಸಿ ನ.18ರಂದು ಬಳ್ಳಾರಿ ನಗರಕ್ಕೆ ಆಗಮಿಸಲಿದೆ ಎಂದು ಹೇಳಿದರು.

**ಎರಡು ದಿನಗಳ ವಿಜೃಂಭಣೆ ಕಾರ್ಯಕ್ರಮ:**
ಕರ್ನಾಟಕ ಸಂಭ್ರಮ-50ರ ರಥಯಾತ್ರೆ ಸಂಚಾರ ಹಿನ್ನಲೆಯಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನ.18ರಿಂದ ಎರಡು ದಿನಗಳ ಕಾಲ ಜಿಲ್ಲಾ ಮಟ್ಟದಲ್ಲಿ ವಿಜೃಂಭಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎಡಿಸಿ ಮೊಹಮ್ಮದ್ ಝುಬೇರಾ ಅವರು ಹೇಳಿದರು.

ಅಂದು, ಬೆಳಿಗ್ಗೆ ನಗರದ ಸುಧಾಕ್ರಾಸ್‌ನಿಂದ ರಥಯಾತ್ರೆಗೆ ಅದ್ದೂರಿ ಸ್ವಾಗತ ಮಾಡಲಿದ್ದು, ವಿವಿಧ ಸಾಂಸ್ಕೃತಿಕ ಕಲಾತಂಡಗಳು ಹಾಗೂ ವಿವಿಧ ಇಲಾಖೆಗಳ ಸ್ತಬ್ಧಚಿತ್ರಗಳಿಂದ ಭವ್ಯ ಮೆರವಣಿಗೆ ನಡೆಯಲಿದೆ. ನಂತರ ನಗರದ ರಾಘವ ಕಲಾಮಂದಿರದಲ್ಲಿ ವೇದಿಕೆ ಕಾರ್ಯಕ್ರಮ, ಕವಿಗೋಷ್ಠಿ ಸೇರಿದಂತೆ ಕರ್ನಾಟಕ ಏಕೀಕರಣ ಕುರಿತಾಗಿ ವಿಶೇಷಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಅವರು ತಿಳಿಸಿದರು.

**500 ಮೀ. ಉದ್ದದ ಕನ್ನಡ ಬಾವುಟ ಮೆರವಣಿಗೆ:**
ಕರ್ನಾಟಕ ಸಂಭ್ರಮ-50ರ ರಥಯಾತ್ರೆ ಸಂಚಾರ ಅಂಗವಾಗಿ, ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ವಿವಿಧಕನ್ನಡಪರಸಂಘಟನೆಗಳನ್ನೊಳಗೊಂಡಂತೆ 500 ಮೀ. ಉದ್ದದ ಕನ್ನಡ ಬಾವುಟದ ಮೆರವಣಿಗೆ ಆಯೋಜಿಸಲು ಯೋಜಿಸಲಾಗಿದೆ. ಈ ಕುರಿತು ಅಗತ್ಯ ಪೂರ್ವ ತಯಾರಿ ಮಾಡಿಕೊಳ್ಳುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾಧಿಕಾರಿಗಳಿಗೆ ಎಡಿಸಿ ಅವರು ಸೂಚಿಸಿದರು.

**ಕರ್ನಾಟಕ ಸಂಭ್ರಮ-50ರ ರಥಯಾತ್ರೆಯ ಸಂಚಾರ ವಿವರ:**
ಕರ್ನಾಟಕ ಸಂಭ್ರಮ-50ರ ರಥಯಾತ್ರೆಯು ನ.16ರಂದು ಸಂಡೂರು ತಾಲ್ಲೂಕಿನಲ್ಲಿ ಸಂಚಾರ, ನ.18ರಂದು ಬಳ್ಳಾರಿ ನಗರ ಮತ್ತು ತಾಲ್ಲೂಕು ವ್ಯಾಪ್ತಿಯಲ್ಲಿ ಸಂಚಾರ, ನ.20ರಂದು ಕುರುಗೋಡು ತಾಲ್ಲೂಕು, ನ.22ರಂದು ಕಂಪ್ಲಿ ತಾಲ್ಲೂಕು ಹಾಗೂ ನ.24ಕ್ಕೆ ಸಿರುಗುಪ್ಪ ತಾಲ್ಲೂಕಿನಲ್ಲಿ ಸಂಚರಿಸಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಹೊನ್ನುರಪ್ಪ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ ಮಳಿಗೆಗಳನ್ನು ಹಾಕಬೇಕು ಎಂದು ವಿವಿಧ ಕನ್ನಡಪರ ಸಂಘಟನೆಗಳು ಮನವಿ ಮಾಡಿದರು. ರಥಯಾತ್ರೆ ಸಂಚರಿಸುವ ಮೆರವಣಿಗೆಯ ಮಾರ್ಗಗಳನ್ನು ಬೀದಿ ದೀಪಾಲಂಕಾರ, ಈ ಭಾಗದ ಹುತಾತ್ಮರ ಭಾವಚಿತ್ರದ ದ್ವಾರ ಬಾಗಿಲು ನಿರ್ಮಿಸಬೇಕು. ನಗರದಲ್ಲಿ ವಿವಿಧ ಖಾಸಗಿ ಅಂಗಡಿ-ಮುಂಗಟ್ಟುಗಳ ನಾಮಫಲಕಗಳು ಕಡ್ಡಾಯವಾಗಿ ಕನ್ನಡದಲ್ಲಿರಬೇಕು ಎಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ರಥಯಾತ್ರೆ ಸಂಚಾರ ಅದ್ದೂರಿಯಾಗಿ ಆಚರಿಣೆ ಮಾಡಲು ತಮ್ಮ ಸಲಹೆ-ಸೂಚನೆಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಮುಖ್ಯವಾಗಿ ಶಾಲೆ-ಕಾಲೇಜು ವಿದ್ಯಾರ್ಥಿಗಳು ಭಾಗವಹಿಸುವಂತೆ ಎಡಿಸಿ ಝುಬೇರಾ ಅವರು ಡಿಡಿಪಿಐ ಅವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು, ಮತ್ತಿತರರು ಉಪಸ್ಥಿತರಿದ್ದರು.

# ಹಸಿರು ಪಟಾಕಿಯಿಂದ ಪರಿಸರ ರಕ್ಷಣೆ

## ಹಸಿರು ಪಟಾಕಿ ಹೊಡೆಯುವುದರ ಜೊತೆಗೆ ಪರಿಸರದ ರಕ್ಷಣೆಗೆ ಮನವಿ

■ ಹಂಪಿ ಟೈಮ್ಸ್ ಕೊಪ್ಪಳ :
ಪ್ರತಿ ವರ್ಷದಂತೆ ಈ ಬಾರಿಯೂ ಬೆಳಕಿನ ಹಬ್ಬ ದೀಪಾವಳಿಯನ್ನು ಪರಿಸರ ಸ್ನೇಹಿ ಹಸಿರು ಪಟಾಕಿ ಬಳಕೆಯೊಂದಿಗೆ ಆಚರಿಸಿ ಮಾಲಿನ್ಯ ನಿಯಂತ್ರಣಕ್ಕೆ ಮುಂದಾಗಬೇಕು ಎಂದು ಜಿಲ್ಲಾ ಪರಿಸರ ಅಧಿಕಾರಿ ಎಸ್.ಸಿ.ಸುರೇಶ್ ಅವರು ತಿಳಿಸಿದ್ದಾರೆ.

ಜಿಲ್ಲಾ ವ್ಯಾಪ್ತಿಯಲ್ಲಿ ಪಟಾಕಿಗಳ ಮಾರಾಟ ಮತ್ತು ನಿಯಂತ್ರಿಸುವ ಕುರಿತು ಈಗಾಗಲೇ ಹಸಿರು ಪಟಾಕಿ ಮಾರಾಟಕ್ಕೆ ಮಾತ್ರ ಅವಕಾಶವಿದ್ದು, ಹಸಿರು ಪಟಾಕಿ ಅವುಗಳ ಪ್ಯಾಕೆಟ್ ಮೇಲೆ ಹಸಿರು ಪಟಾಕಿಯ ಚಿಹ್ನೆ ಇದ್ದು ಕ್ಯೂಆರ್ ಕೋಡ್ ಇರುವ ಪಟಾಕಿಗಳನ್ನೇ ಉಪಯೋಗಿಸಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಹಸಿರು ಪಟಾಕಿಗಳ ಹೊರತು ಪಡಿಸಿ ಉಳಿದ ಪಟಾಕಿಗಳನ್ನು ಬಳಕೆ ಮಾಡಬಾರದು. ರಾತ್ರಿ 8 ರಿಂದ 10 ಗಂಟೆಯವರೆಗೆ ಮಾತ್ರ ಪಾಟಾಕಿ ಸಿಡಿಸಲು ಅವಕಾಶವಿದ್ದು, ದೀಪಾವಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು. ಇವುಗಳನ್ನು ಬಳಸುವಾಗ ಪ್ರಾಣಿ ಪಕ್ಷಿಗಳು ಮಕ್ಕಳು ಮತ್ತು ವೃದ್ದರಿಗೆ ತೊಂದರೆಯಾಗದಂತೆ ಬಳಸಬೇಕು. ಆಸ್ಪತ್ರೆ, ಶಿಕ್ಷಣ ಸಂಸ್ಥೆ ಸುತ್ತಮುತ್ತ ಹಾಗೂ ನಿಷೇಧಿತ ಪ್ರದೇಶಗಳಲ್ಲಿ ಯಾವುದೇ ರೀತಿಯ ಸಿಡಿಮದ್ದುಗಳನ್ನು ಸ್ಫೋಟಿಸುವಂತಿಲ್ಲ. ತಹಶೀಲ್ದಾರರು, ವೃತ್ತ ನಿರೀಕ್ಷಕರು, ತಮ್ಮ ವ್ಯಾಪ್ತಿಯಲ್ಲಿ ಮಾರಾಟಗಾರರ ಗೋದಾಮುಗಳನ್ನು ಪರಿವೀಕ್ಷಿಸಿದ್ದು, ಹಸಿರು ಪಟಾಕಿಗಳಲ್ಲದೆ ಬೇರೆ ಯಾವುದೇ ನಿಷೇಧಿತ ಪಟಾಕಿಗಳನ್ನು ಶೇಖರಿಸಿದ್ದಲ್ಲಿ ಮುಟ್ಟುಗೋಲು ಹಾಕಿಕೊಂಡು ಸಂಬಂಧಿತ ವ್ಯಕ್ತಿಗಳ ಮೇಲೆ ಕಾನೂಕು ಕ್ರಮ ಕೈಗೊಳ್ಳಲಾಗುವುದು. ತಾತ್ಕಾಲಿಕವಾಗಿ ಪಟಾಕಿ ಮಳಿಗೆಗಳನ್ನು ತೆರೆಯುವ ಮಾಲೀಕರು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡು ಅನುಮತಿ ಪತ್ರದಲ್ಲಿ ನೀಡಿದ ಷರತ್ತುಗಳನ್ನು ತಪ್ಪದೇ ಪಾಲಿಸಬೇಕು. ಸಾರ್ವಜನಿಕರಿಗೆ ಮತ್ತು ಮಕ್ಕಳಲ್ಲಿ ಅರಿವು ಮೂಡಿಸಲು ಪರಿಣಾಮಕಾರಿಯಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.




ಪರಿಸರ ಸ್ನೇಹಿ ದೀಪಾವಳಿ ಹಬ್ಬ ಆಚರಿಸುವ ಕುರಿತು ಸಾರ್ವಜನಿಕ ಸ್ಥಳಗಳಾದ ರೈಲ್ವೇ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ಕರ ಪತ್ರ ಹಂಚುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಬೇಕು. ಹೊರ ರಾಜ್ಯಗಳಿಂದ ಅನಧಿಕೃತವಾಗಿ ಯಾವುದೇ ರೀತಿಯ ಪಟಾಕಿಗಳನ್ನು ಸಾಗಾಟ ಮಾಡದಂತೆ ಕ್ರಮ ಕೈಗೊಳ್ಳಬೇಕು. ಅದರಂತೆ ಎಲ್ಲಾ ಗಡಿ ಭಾಗಗಳ ಚೆಕ್ ಪೋಸ್ಟ್‌ಗಳಲ್ಲಿ ವಾಣಿಜ್ಯ ಅಧಿಕಾರಿಗಳು ತಪಾಸಣೆ ಮಾಡಿ ಮುಟ್ಟುಗೋಲು ಹಾಕಿಕೊಳ್ಳಬೇಕು. ದೀಪಾವಳಿ ಸಮಯದಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ವಿಲೇವಾರಿ ಕುರಿತು ಸ್ಥಳೀಯ ಸಂಸ್ಥೆಗಳು ಕ್ರಮ ವಹಿಸಬೇಕು.

ಸಾಂಪ್ರದಾಯಿಕ ಪಟಾಕಿಗಳಿಗಿಂತ ಹಸಿರು ಪಟಾಕಿಗಳು ಕಡಿಮೆ ಗಾತ್ರದಲ್ಲಿದ್ದು, ಇವುಗಳ ತಯಾರಿಕೆಯಲ್ಲಿ ಬಳಸುವ ರಾಸಾಯನಿಕವು ಶೇ.30 ರಿಂದ 40 ರಷ್ಟು ಕಡಿಮೆ ಪ್ರಮಾಣದಲ್ಲಿರುತ್ತದೆ. ಪಟಾಕಿ ಸಿಡಿಸುವ ಸಂದರ್ಭದಲ್ಲಿ ಹೊರಸೂಸುವ ರಾಸಾಯನಿಕ ಹೊಗೆ ಧೂಳನ್ನು ಕಡಿಮೆ ಮಾಡುವ ವಾತಾವರಣ ಪರಿವೇಷ್ಟಕ ಗಾಳಿಯಲ್ಲಿ ತೇಲಾಡುವ ಧೂಳಿನ ಕಣಗಳು So2 ಮತ್ತು No2 ಅಂಶಗಳ ಪ್ರಮಾಣವು ಶೇ.30 ರಷ್ಟು ಕಡಿಮೆಯಾಗಲಿದೆ.

ನಗರ ಮತ್ತು ಪಟ್ಟಣದ ಚಿಕ್ಕ ಚಿಕ್ಕ ಬೀದಿಗಳಲ್ಲಿ ಪಟಾಕಿ ಮತ್ತು ಸಿಡಿಮದ್ದುಗಳನ್ನು, ಬಾಣ ಬಿರುಸುಗಳನ್ನು ಉಪಯೋಗಿಸುವುದರಿಂದ ಅಲ್ಲಿನ ನಿವಾಸಿಗಳಿಗೆ ಹಾನಿಯುಂಟಾಗುವ ಅಥವಾ ಬೆಂಕಿ ಹಾಗೂ ಸ್ಫೋಟದಿಂದ ಅಪಾಯಗಳು ಆಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಪಟಾಕಿ ಹಾಗೂ ಸಿಡಿಮದ್ದುಗಳನ್ನು ವಸತಿ ಪ್ರದೇಶಗಳಲ್ಲಿ ಉಪಯೋಗಿಸುವ ಬದಲು ಮೈದಾನಗಳಲ್ಲಿ ಒಟ್ಟಾಗಿ ಸೇರಿ ಸಿಡಿಸಲು ವಿನಂತಿಸಲಾಗಿದೆ. ಅಲ್ಲದೇ ದೀಪಾವಳಿ ಹಬ್ಬವನ್ನು ಸಿಡಿಮದ್ದು, ಪಟಾಕಿಗಳನ್ನು ಉಪಯೋಗಿಸದೇ ದೀಪಾವಳಿ ಹಬ್ಬವನ್ನು ದೀಪದ ಹಬ್ಬವನ್ನಾಗಿ ಆಚರಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕೊಪ್ಪಳ ಪ್ರಾದೇಶಿಕ ಕಚೇರಿಯ ಜಿಲ್ಲಾ ಪರಿಸರ ಅಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

# 10 ರಂದು 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

■ ಹಂಪಿ ಟೈಮ್ಸ್ ಕೊಪ್ಪಳ :
ಆಯುಷ್ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಆಯುರ್ವೇದ ಪಿತಾಮಹ ಧನ್ವಂತರಿ ಜಯಂತಿಯ ಪ್ರಯುಕ್ತ 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ-2023 ಕಾರ್ಯಕ್ರಮವನ್ನು ನವೆಂಬರ್ 10 ರಂದು ಬೆಳಿಗ್ಗೆ 11 ಗಂಟೆಗೆ ಗವಿಮಠ ಹಿಂದುಗಡೆ ಇರುವ ಸುರಭಿ ವೃದ್ಧಾಶ್ರಮದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಸಂಗಪ್ಪ ತಂಗಡಗಿ ಅವರು ಉದ್ಘಾಟಿಸುವರು. ಕೊಪ್ಪಳ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕೊಪ್ಪಳ ಸಂಸದರಾದ ಸಂಗಣ್ಣ ಕರಡಿ, ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ, ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ, ಗಂಗಾವತಿ ಶಾಸಕರಾದ ಜಿ.ಜನಾರ್ಧನರೆಡ್ಡಿ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ್ ಜಿ.ನಮೋಶಿ, ಡಾ.ಚಂದ್ರಶೇಖರ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ, ಹೇಮಲತಾ ನಾಯಕ, ಸುರಭಿ ವೃದ್ಧಾಶ್ರಮದ ಅಧ್ಯಕ್ಷರಾದ ಶಂಕರ ಪಾಟೀಲ ಬಿ.ಜಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನರಾಜ್, ಆಯುಷಷ ನಿರ್ದೇಶನಾಲಯದ ಆಯುಕ್ತರಾದ ಲೀಲಾವತಿ ಕೆ. ಭಾಗವಹಿಸುವರು.

ಕಾರ್ಯಕ್ರಮದಲ್ಲಿ
ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ ಅವರು ಉಪಸ್ಥಿತರಿರುವರು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ವಾಯ್. ಜೆ.ಶಿರವಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ನ.10 ಮತ್ತು 11 ರಂದು ಬಳ್ಳಾರಿಯಲ್ಲಿ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ :**
ನಗರ ಜೆಸ್ಕಾಂ ಉಪವಿಭಾಗ-2 ರ ವ್ಯಾಪ್ತಿಗೆ ಬರುವ 110/11ಕೆವಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಇನ್‌ಫ್ಯಾಂಟ್ರಿ ರಸ್ತೆಯಲ್ಲಿ ಕೈಗೆತ್ತಿಕೊಳ್ಳುತ್ತಿರುವುದರಿಂದ ನ.10 ಮತ್ತು 11 ರಂದು ಎರಡು ದಿನಗಳ ಕಾಲ ಬೆಳಿಗ್ಗೆ 09 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ನ.10ರಂದು ವಿದ್ಯುತ್ ವ್ಯತ್ಯಯವಾಗುವ **ಪ್ರದೇಶಗಳು:** ಎಫ್-33 ಫೀಡರ್ ವ್ಯಾಪ್ತಿಯ ಕೆ. ಹೆಚ್.ಬಿ.ಕಾಲೋನಿ, ನೇತಾಜಿ ನಗರ, ಇನ್ನಾರೆಡ್ಡಿ ಲೇಔಟ್, ಇನ್‌ಫೆಂಟರಿ ರಸ್ತೆ, ವಾಸವಿ ಶಾಲೆ, ಕೊಳಗಲ್ ರಸ್ತೆ, ವಿದ್ಯಾನಗರ, ಕಲ್ಯಾಣಿ ಕಾಲೋನಿ, ಭತ್ರಿ ರೋಡ್, ಭತ್ರಿ, ಗುರು ಕಾಲೋನಿ, ಸತ್ಯವಾಣಿ ನಗರ, ಸಿದ್ಧಾರ್ಥ ನಗರ, ವಿಯಾನಿ ಶಾಲೆ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-2ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಶೋಕ ರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.11ರಂದು ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:
ಎಫ್-7 ಫೀಡರ್‌ನ ಸಂಗನಕಲ್ಲು ರಸ್ತೆ, ಎಸ್.ಎನ್.ಪೇಟ್ 3ನೇ ಕ್ರಾಸ್, ಜಿಲ್ಲಾ ಆಸ್ಪತ್ರೆ, ರಾಘವ ಕಲಾಮಂದಿರ, ಅನಂತಪುರ ರಸ್ತೆ, ವಡ್ಡರ ಬಂಡೆ, ಅಗಡಿ ಮಾರೆಪ್ಪ ಕಾಂಪೌಂಡ್, ರೂಪನಗುಡಿ ರಸ್ತೆ, ಮುಬರಕ್ ಟಾಕೀಸ್, ಬಾಲಾಜಿರಾವ್ ರಸ್ತೆ, ಕೆ.ಸಿ.ರೋಡ್, ಮೀನಾಕ್ಷಿ ಸರ್ಕಲ್, ಬೆಂಗಳೂರು ರಸ್ತೆ, ದುಗ್ಗಪ್ಪ ಬೀದಿ, ರೆಡ್ಡಿ ಬೀದಿ, ಆಲ್ಲಂ ಬೀದಿ, ಮುಲ್ಲಂಗಿ ಸಂಜೀವಪ್ಪ ಬೀದಿ, ರೂಪನಗುಡಿ ನರಪ್ಪ ಬೀದಿ, ತಾಯಮ್ಮಕಟ್ಟೆ.

ಎಫ್-9 ಫೀಡರ್‌ನ ನೆಹರು ಕಾಲೋನಿ 1ನೇ ಅಡ್ಡರಸ್ತೆ, 2ನೇ ಅಡ್ಡರಸ್ತೆ, ಶಂಕರ್ ಕಾಲೋನಿ, ಎಸ್.ಎನ್.ಪೇಟೆ 6ನೇ, 5ನೇ ಮತ್ತು 4ನೇ, 3ನೇ ಅಡ್ಡರಸ್ತೆ, ಡಿಅರ್ ಗ್ರೌಂಡ್, ಕೂಲ್ ಕಾರ್ನರ್, ಡಬಲ್ ರಸ್ತೆ, ಕೋಲಾಚಾಲಂ ಕಾಂಪೌಂಡ್, ರಾಯಲ್ ಸರ್ಕಲ್, ಗಾಂಧಿ ಭವನ, ಸಿಎಂಸಿ, ಅಂಬಲಿ ಬಾಗ್, ತಾಲೂಕು ಕಚೇರಿ, ಡಿಸಿ ಕಚೇರಿ ಸೇರಿದಂತೆ ಇನ್ನೂ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ತಿಳಿಸಿದ್ದಾರೆ.

# 11 ರಂದು ವೀರರಾಣಿ ಒನಕೆ ಓಬವ್ವ ಜಯಂತಿ

■ ಹಂಪಿ ಟೈಮ್ಸ್ ಕೊಪ್ಪಳ :
2023-24ನೇ ಸಾಲಿನ ವೀರರಾಣಿ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದಲ್ಲಿ ನವೆಂಬರ್ 11 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದ ಎಲ್ಲ ಅಧಿಕಾರಿಗಳು ತಮ್ಮ ಸಿಬ್ಬಂದಿಯೊಂದಿಗೆ ತಪ್ಪದೇ ಹಾಜರಾಗಬೇಕು ಹಾಗೂ ತಮ್ಮ ಕಾರ್ಯಾಲಯ ಮತ್ತು ತಮ್ಮ ಅಧೀನ ಕಾರ್ಯಾಲಯಗಳಲ್ಲಿ ಜಯಂತಿ ಆಚರಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಉಚ್ಚಂಗೆಮ್ಮನ ದೇವಸ್ಥಾನದಲ್ಲಿ ಗೋಪೂಜೆ ಕಾರ್ಯಕ್ರಮ



**ಹಂಪಿ ಟೈಮ್ಸ್ ಹರಪನಹಳ್ಳಿ :**
ತಾಲೂಕಿನ ಉಚ್ಚಂಗಿದುರ್ಗ ಗ್ರಾಮದ ಶ್ರೀ ಉಚ್ಚಂಗೆಮ್ಮನ ದೇವಸ್ಥಾನದಲ್ಲಿ ದಿನಾಂಕ 14 ರ ಮಂಗಳವಾರದಂದು ದೀಪಾವಳಿ ಬಲಿ ಪಾಡ್ಯಮಿ ದಿನದಂದು ಸಂಜೆ 5:30 ರಿಂದ 6:30 ವರಿಗೆ ಗೋಧುಳಿ ಲಗ್ನದಲ್ಲಿ ವಿಶೇಷ ಗೋಪೂಜೆ ಕಾರ್ಯಕ್ರಮ ನೆರವೇರಲಿದ್ದು,
ಈ ಕಾರ್ಯಕ್ರಮಕ್ಕೆ ಸಕಲ ಭಕ್ತದದಿಗಳು ಗ್ರಾಮಸ್ತರು ಸ್ಥಳೀಯ ಜನ ಪ್ರತಿನಿದಿಗಳು ಊರಿನ ಗುರು ಹಿರಿಯರುಗಳು ಬಂದು ಕಾರ್ಯಕ್ರಮ ವನ್ನು ಯಶಸ್ವಿಗೊಳಿಸಿ ಶ್ರೀ ದೇವಿಯ ಕೃಪಾಆಶೀರ್ವಾದ ಪಡೆದುಕೊಳ್ಳಬೇಕೆಂದು ಹಿಂಧೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯಿ ದತ್ತಿ ಇಲಾಖೆಯವರು ತಿಳಿಸಿದರು

## ಕೊಲೆ ಅಪರಾಧಿಗಳಿಗೆ ಶಿಕ್ಷೆ ದಂಡ

**ಮೊದಲ ಪುಟದಿಂದ**
ಬ್ರೂಸ್‌ಪೇಟೆಠಾಣೆತನಿಖಾಧಿಕಾರಿಯವರು ಆರೋಪಿತರ ವಿರುದ್ಧ ಸಾಕ್ಷ್ಯಾಗಳನ್ನು ಸಂಗ್ರಹಿಸಿ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸದರಿ ಪ್ರಕರಣದಲ್ಲಿ ಅಭಿಯೋಜನೆ ಪರವಾಗಿ ಒಟ್ಟು 23 ಜನ ಸಾಕ್ಷಿದಾರರನ್ನು ವಿಚಾರಿಸಿ ಒಟ್ಟು 1 ರಿಂದ 60 ದಾಖಲೆಗಳನ್ನು ಗುರುತಿಸಿ ಹಾಗೂ ಮುದ್ದೆಮಾಲ್ 1ರಿಂದ13ಗುರುತಿಸಲಾಗಿದೆ.

ನಂತರ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ ವಾದ ವಿವಾದವನ್ನು ಆಲಿಸಿದ ನಂತರ ನ್ಯಾಯಾಲಯವು ಆರೋಪಿತರು ತಪ್ಪಿಸ್ಥರು ಎಂದು ಪರಿಗಣಿಸಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಸ್.ಹೆಚ್.ಪುಷ್ಪಾಂಜಲಿದೇವಿ ಅವರು ಕಲಂ:302 ಐಪಿಸಿ ಅಡಿಯಲ್ಲಿ ಜೀವಾವಧಿ ಶಿಕ್ಷೆ ಹಾಗೂ ದಂಡ 25,000 ವಿಧಿಸಿದ್ದು ಹಾಗೂ ಕಲಂ: 114 ಐಪಿಸಿ ಅಡಿಯಲ್ಲಿ 7 ವರ್ಷ ಕಠಿಣ ಶಿಕ್ಷೆ ಹಾಗೂ ದಂಡ 10,000 ರೂ.ಗಳನ್ನು ವಿಧಿಸಿದ್ದಾರೆ.

ಆರೋಪಿತರು ದಂಡ ಕೊಡಲು ತಪ್ಪಿದಲ್ಲಿ ಪುನಃ 3 ವರ್ಷಗಳ ಹೆಚ್ಚಿನ ಶಿಕ್ಷೆ ಅನುಭವಿಸಬೇಕು ಎಂದು ತೀರ್ಪು ನೀಡಿರುತ್ತಾರೆ. ಆರೋಪಿತರಿಗೆ ನೀಡಿದ ದಂಡ 1,05,000 ರೂ.ಗಳನ್ನು ಮೃತನ ತಂದೆ ತಾಯಿಗೆ ನೀಡಬೇಕೆಂದು ಆದೇಶಿಸಿದ್ದಾರೆ. ಹಾಗೂ ಕಲಂ. 357(ಎ) ಸಿಆರ್‌ಪಿಸಿ ಅಡಿಯಲ್ಲಿ ಮೃತ ಕುಟಂಬಕ್ಕೆ ಪರಿಹಾರ ನೀಡಬೇಕೆಂದು ಸಹ ಜಿಲ್ಲಾ ಕಾನೂನು ನೇರವು ಸಮಿತಿಗೆ ಆದೇಶಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಎಂ.ಬಿ.ಸುಂಕಣ್ಣ, ಪ್ರಧಾನ ಸರ್ಕಾರಿ ಅಭಿಯೋಜಕರು ಸರ್ಕಾರದ ಪರವಾಗಿ ವಿಚಾರಣೆ ನಡೆಸಿ ವಾದ ಮಂಡಿಸಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

## ನ.16 ರಂದು ಎಸ್‌ಸಿಪಿ-ಟಿಎಸ್‌ಪಿ ಜಿಲ್ಲಾ ಮೇಲ್ವಿಚಾರಣಾ ಸಮಿತಿ ಸಭೆ

**ಹಂಪಿ ಟೈಮ್ಸ್ ಕೊಪ್ಪಳ :**
ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ 2013 ರನ್ವಯ ಅನುಸೂಚಿತಜಾತಿಗಳು ಉಪಯೋಜನೆ/ಬುಡಕಟ್ಟು ಉಪಯೋಜನೆಗಳ ಪ್ರಗತಿ ಪರಿಶೀಲನೆಗಾಗಿ ಜಿಲ್ಲಾ ಮೇಲ್ವಿಚಾರಣಾ ಸಮಿತಿ ಸಭೆಯನ್ನು ನ.16 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ವಹಿಸಿಕೊಳ್ಳುವರು. ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.







# ಆಟೋರಾಜ ಶಂಕರನಾಗ್ ಜನ್ಮದಿನ

## ಕೂಡ್ಲಿಗಿಯಲ್ಲಿ ಆಟೋರಾಜನ ಜನ್ಮದಿನ ಆಚರಿಸಿದ ಅಭಿಮಾನಿಗಳು । ಆಟೋ ನಿಲ್ದಾಣಕ್ಕೆ ಹೆಸರಿಟ್ಟು ಅಭಿಮಾನ ಮೆರೆದ ಚಾಲಕರು

**ಹಂಪಿ ಟೈಮ್ಸ್ ಕೂಡ್ಲಿಗಿ**
ಕನ್ನಡ ಸಿನಿಮಾರಂಗದ ಮರೆಯಲಾಗದ ಮಾಣಿಕ್ಯ, ಜೀವನೋತ್ಸಾಹಿ, ಕರಾಟೆ ಕಿಂಗ್ ಶಂಕರ್ ನಾಗ್ ಹುಟ್ಟುಹಬ್ಬವನ್ನು ಆಟೋ ಚಾಲಕರ ಸಂಘದ ವತಿಯಿಂದ ಗುರುವಾರ ಪಟ್ಟಣದ ಆಟೋ ನಿಲ್ದಾಣದಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈ ಸಂಧರ್ಭದಲ್ಲಿ ಆಟೋ ಚಾಲಕರ ಸಂಘದ ತಾಲೂಕು ಅಧ್ಯಕ್ಷ ಮಯೂರ ಮಂಜುನಾಥ ಮಾತಾನಾಡಿ, ಪ್ರತಿಭಾವಂತ ನಟ, ನಿರ್ದೇಶಕ, ತಂತ್ರಜ್ಞ ಮತ್ತು ಹೊಸ ಚಿಂತನೆಗಳ ಹರಿಕಾರ ಆಟೋರಾಜ ಶಂಕರ್ ನಾಗ್ ಅವರ 69ನೇ ವರ್ಷದ ಹುಟ್ಟುಹಬ್ಬವನ್ನು ಆಟೋ ಚಾಲಕ ಅಭಿಮಾನಿಗಳು ಆಚರಿಸುತ್ತಿರುವುದು ನಮ್ಮ ನಾಡಿನ ಹೆಮ್ಮೆಯ ಪ್ರತೀಕ.

ಕನ್ನಡ ಸಿನಿರಂಗದ ಮೇರು ನಟನಾಗಿ ಆಟೋ ಚಾಲಕರ ಮನಗೆದ್ದು,ಆಟೋಚಾಲಕನ ಕರ್ತವ್ಯ ಪ್ರಜ್ಞೆ, ಆತನು ಕೂಡ ಸಮಾಜದಲ್ಲಿ ಸಮಾಜಮುಖಿಯಾಗಿ ಯಾವೆಲ್ಲ ಕಾರ್ಯಗಳನ್ನು ಮಾಡಬಹುದು ಎಂದು ತೋರಿಸಿದ



ಮೊದಲ ನಾಯಕ ನಟ ಶಂಕರ್ ನಾಗ್. ಆ ನಿಟ್ಟಿನಲ್ಲಿ ಅಂದಿನಿಂದ ಇಲ್ಲಿಯವರೆಗೂ ನಾಡಿನ ಸಮಸ್ತ ಆಟೋ ಚಾಲಕರು ಅವರ ಅಭಿಮಾನವನ್ನು ಆಟೋದ ಮೇಲೆ ಹಾಗೂ ಆಟೋ ನಿಲ್ದಾಣಕ್ಕೆ ಹೆಸರಿಟ್ಟು ಅಭಿಮಾನ ಮೆರೆಯುತ್ತಿರುವುದು ಶ್ಲಾಘನೀಯ.


ಅವರು ಹಾಕಿ ಕೊಟ್ಟ ಮಾರ್ಗದರ್ಶನ ದಲ್ಲಿಯೇ ಆಟೋ ಚಾಲಕರು ಸಮಾಜಮುಖಿ ಕೆಲಸಗಳನ್ನ ಮಾಡಿ ಜನ, ಮನ ಗೆದ್ದಿದ್ದಾರೆ. ಅಪಘಾತಗಳು ಸಂಭವಿಸಿದಾಗ ಮೊದಲು ಸಹಾಯಕ್ಕೆ ಕೈ ಚಾಚುವರೇ ಆಟೋ ಚಾಲಕರು, ಅದರಂತೆ ಗರ್ಭಿಣಿ, ಬಾಣಂತಿಯರಿಗೆ, ಅಶಕ್ತರಿಗೆ ರಕ್ತದ ಅವಶ್ಯಕತೆ ಎದುರಾದಗ ಮೊದಲು ನೆನಪಾಗುವುದೇ ಆಟೋ ಚಾಲಕರು ಅಷ್ಟು ಸಮಾಜದಲ್ಲಿ ಆಟೋ ಚಾಲಕರು ಜನಮನ್ನಣೆ ಗಳಿಸಿದ್ದಾರೆ. ಆದರೆ ಅವರ ಬದುಕು ಸಂಕಷ್ಟದಲ್ಲಿದೆ, ಸರ್ಕಾರ ಆಟೋ ಚಾಲಕರನ್ನು ಕಾರ್ಮಿಕರ ಸಂಘದಡಿಯಲ್ಲಿ ತಂದು ಅವರ ಮತ್ತು ಕುಟುಂಬಕ್ಕೆ ಜೀವವಿಮೆ,ವಿಧ್ಯಾರ್ಥಿಗಳಿಗೆ ಸಹಾಯಧನ ಸೇರಿದಂತೆ ಆರ್ಥಿಕ ಸಬಲೀಕರಣ ಮಾಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ಒತ್ತಾಯಿಸಿದರು. ಮೊದಲಿಗೆ ಶಂಕರ್ ನಾಗ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಬೃಹತ್ ಕೇಕ್ ತಂದು ಕತ್ತರಿಸಿ,ನೆರೆದಿದ್ದ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಮಾಡಿ ಸಂಭ್ರಮಿಸಿದರು. ಈ ಸಂಧರ್ಭದಲ್ಲಿ ಆಟೋಚಾಲಕರಾದ ಡಿ.ಚೌಡಪ್ಪ, ಗಜ ನಾಗರಾಜ,ಗಿರೀಶ್, ಟೈಗರ್ ದುರುಗಪ್ಪ, ಅಪ್ಪೆ ರಾಮು,ರಮೇಶ್, ಸುರೇಶ್, ತೋಟಪ್ಪ,ಮಲ್ಲಿಕಾರ್ಜುನ, ಗುಪ್ಪಾಲ ಗೋವಿಂದಪ್ಪ ಸೇರಿದಂತೆ ಅನೇಕರು ಇದ್ದರು.

## ನ.11 ರಂದು ಕಲಬುರಗಿ ವಿಭಾಗ ಮಟ್ಟದ ಪ್ರಾಥಮಿಕ, ಪ್ರೌಢಶಾಲೆಗಳ ಬಾಲಕ/ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ

**ಹಂಪಿ ಟೈಮ್ಸ್ ರಾಯಚೂರು:** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಇವರುಗಳ ಸಂಯುಕ್ತಾಶ್ರಯದಲ್ಲಿ ನ.11 ರಂದು ಬೆಳಿಗ್ಗೆ 10:30 ಗಂಟೆಗೆ ಕಲಬುರಗಿ ವಿಭಾಗ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಬಾಲಕ/ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ 2023-24ನೇ ಕಾರ್ಯಕ್ರಮವನ್ನು ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.



### ತುಂಗಭದ್ರಾ ನೀರಿನ ಮಟ್ಟ



ಗುರುವಾರ : 9-11-2023

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1603.15 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9874 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 25.870 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.07 ಅಡಿ |
| ಒಳ ಹರಿವು | 5245 ಕ್ಯುಸೆಕ್ |
| ಹೊರ ಹರಿವು | 10280 ಕ್ಯುಸೆಕ್ |
| ಸಾಮರ್ಥ್ಯ | 102.054 ಟಿಎಂಸಿ |







ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA